ಕೊರವಂಜಿ

ಸಂಪುಟ ೧೨ ಸೆಪ್ಟೆಂಬರ್ ೧೯೫೩ ಸಂಚಿಕೆ ೬

ಕುಹಕಿಡಿಗಳು

ಕಿವುಡರ ಶಿಕ್ಷಕರ ಸಮ್ಮೇಳನ. ಮದರಾಸ್ ಪ್ರಾಂತಗಳಿಂದ ಹೆಚ್ಚು ಸಂಖ್ಯೆಯಲ್ಲಿ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಹೋಗುವರು. (ಪತ್ರಿಕಾ ವರದಿ)

—ಅಂದರೆ ಅಧಿಕಾರದಲ್ಲಿರುವ ರಾಜಕಾರಣಿಗಳೇ ಹೋಗುತ್ತಾರೆಯೇ?

* * *

ಷೇಕ್ ಅಬ್ದುಲ್ಲಾ ಹೀಗಾದ, ಡಾ|| ಮೊಸಾದಿಕ್ ಹಾಗಾದ, ನಮ್ಮ ಮನೆ ಅಡಿಗೆಯೋನು ಪತ್ತೆಯಿಲ್ಲ. ಇನ್ನು ಹೇಗಪ್ಪಾ ಲೋಕ ಸಾಗುತ್ತೆ ಎಂದೊಬ್ಬಾಕೆ ದುಃಖಪಟ್ಟಳಂತೆ, ದೊಡ್ಡಮನೆಯಲ್ಲಿ.

* * *

ರಾಜಾಜೀಯವರು ಹೇಳದೆ ಕೇಳದೆ ರಾಜಮಂದ್ರಿಗೆ ಹೋದರಂತೆ.

-- ಆಂಧ್ರ ಪ್ರಾಂತ್ಯವಾಗುವ ಮುನ್ನ ಡಂಗುರ ಸಾರಿಸಿಕೊಂಡು ಅಲ್ಲಿಗೆ ಹೋಗುವುದು ಅಷ್ಟು ಹಿತಕರವಲ್ಲ ಅಲ್ಲವೇ?

* * *

ಪ್ರಪಂಚ ಸಂಸ್ಥೆಯಲ್ಲಿ ದ. ಕೊರಿಯಾದ ಆಕ್ರೋಶದ ಬಗ್ಗೆ–ಅಮೆರಿಕಾದ ಬೊಬ್ಬೆಯ ಬಗ್ಗೆ–ಭಾರತವು ರಾಷ್ಟ್ರಪಿತನು ಹೇಳಿಕೊಟ್ಟ ಅಸಹಕಾರವನ್ನೇ ಅನುಸರಿಸುವುದಂತೆ—

—ಮೌನೇನ ಕಲಹಂ ನಾಸ್ತಿ ಆಗಬಹುದೇ??

* * *

ಈ ಸಾರಿ ವರಮಹಾಲಕ್ಷ್ಮಿ ಹಬ್ಬದ ದಿನವೇ ಬಕ್ರೀದ್ ಹಬ್ಬವನ್ನೂ ಆಚರಿಸಿದರಂತೆ.

—ಈ ವಿಷಯವನ್ನು ಯೂ.ನೋ.ಗೆ ಹೇಳಿ ಹಿಂದೂ ಮುಸಲ್ಮಾನ ಬಾಂಧವರು ಇಷ್ಟು ಅನ್ಯೋನ್ಯವಾಗಿದ್ದಾರೆಂದು ತಿಳಿಸಿ, ಕಾಶ್ಮೀರ ನಮ್ಮದು ಎಂದು ಸಿದ್ಧಪಡಿಸಲು ಭಾರತ ಇನ್ನೂ ಕೈಗೊಂಡಿಲ್ಲವಂತೆ.

* * *

ಅಕ್ಕ ಪಕ್ಕದ ಪತ್ರಿಕಾ ಸುದ್ದಿಗಳು.

ಗಾಂಧೀಜೀಯವರ ತತ್ವಗಳಲ್ಲಿ ನಂಬಿಕೆ ಇದ್ದವರು ಸೌಹಾರ್ದ ಸಂಘವನ್ನು ಸ್ಥಾಪಿಸಬೇಕು. "ಶ್ರೀ ಧೋತ್ರಿ"

—ತಾತಾ ಡೆಫರ್ಡ್ ಷೇರಿನ ರೇಟು ಈ ದಿವಸ ೧೯೩೮-೧೨-೦.

* * *

ವಿದ್ಯಾಭ್ಯಾಸ ಸುಧಾರಣೆಗಳು ಮೆಲ್ಲಗೆ ಆಗಬೇಕು. (ಪಂಡಿತರು)

—ಅಲ್ಲವೇ? ಈಗಿನ ವಿದ್ಯಾರ್ಥಿಗಳ ಬುದ್ಧಿಯ ಮಟ್ಟ ನೋಡಿ!

* * *

ಹಾಗೆಂದು ಹೇಳಿದಾಗ ವಿದ್ಯಾರ್ಥಿಯೊಬ್ಬನು ಏನು ಹೇಳಿದ ಗೊತ್ತೆ.

—ಈಗಿನ ಬೋಧಕರ ಬುದ್ಧಿಯ ಮಟ್ಟ ಕೂಡ ನೋಡಿ ಅಂತ.

* * *

ಬಳ್ಳಾರಿ ತಾಲ್ಲೂಕುಗಳು ಮೈಸೂರಿಗೆ ಸೇರುವುದರಿಂದ ತಕ್ಷಣ ದೊರಕುವ ದೊಡ್ಡ ಪ್ರಯೋಜನ "ವಿಶಾಲವಾದ ಜೈಲು" ಎಂದೊಬ್ಬರು ಬರೆದಿದ್ದಾರೆ.

—ಅದರ ಮೇಲೆ ಯಾಕೆ ಇವರ ಕಣ್ಣೋ–ಕಾಣೆವು.

* * *

ಸಂಯುಕ್ತ ಮುಸಲ್ಮಾನ್ ರಾಷ್ಟ್ರವಾಗಬೇಕೆಂದು, ಡಾ॥ ಮೊಸಾದಿಕ್, ಷೇಕ್ ಅಬ್ದುಲ್ಲಾ, ನಿಜಾಂಉದ್ದೀನ್, ಫರೂಕ್, ಇವರೆಲ್ಲರೂ ಒಂದು ಸಂಸ್ಥೆ ಕಟ್ಟಬೇಕೆಂದಿರುವರೆಂಬುದು ಇನ್ನೂ ಖಚಿತವಾಗಿ ಗೊತ್ತಿಲ್ಲವಂತೆ.

ಉರಿಗಾಳು

ಶ್ರೀ ಮೊಸಾದಿಕ್‌ರವರು "ಎಣ್ಣೆ ಬಂದಾಗ ಕಣ್ಣು ಮುಚ್ಚಿ"ಕೊಂಡರಂತೆ.

* * *

ಆಸ್ಪತ್ರೆಗಳಲ್ಲಿರುವ ಕೆಳ ನೌಕರರು ಸಣ್ಣ ಪುಟ್ಟ ಕೈಕಸುಬುಗಳನ್ನು ಅವಲಂಬಿಸಿ ತಮ್ಮ ಜೀವನದ ಮಟ್ಟವನ್ನು ಉತ್ತಮಪಡಿಸಿಕೊಳ್ಳಬಹುದು. (ಭಾಷಣ) ಸಣ್ಣ ಪುಟ್ಟ ಬಹುಮಾನಗಳಿಗೆ ಕೈ ನೀಡುವುದೂ ಒಂದು ಕೈ ಕಸಬು.

* * *

ರೇಷ್ಮೆಗೆ ಸಂಬಂಧಪಟ್ಟ ಎಲ್ಲ ವರ್ಗಗಳ—ರೈತರ ಕೈಗಾರಿಕೆಯವರ ವ್ಯಾಪಾರಸ್ಥರ ಕೊಳ್ಳುವವರ—ಈ ಎಲ್ಲ ವರ್ಗಗಳ ದೃಷ್ಟಿಯಿಂದ ರೇಷ್ಮೆ ಬೋರ್ಡು ರಚಿತವಾಗಿದೆ (ವರದಿ) ಉತ್ಪತ್ತಿಗಾರರು, ಪಾಪ, ಹುಳಗಳು ಎಂದು ಮೊದಲೇ ನಿರ್ಧರವಾಗಿ ಹೋಗಿದೆ.

* * *

ರೇಡಿಯೋ ನಿಲಯಗಳಲ್ಲಿ ತಮ್ಮ ಶಾರೀರವನ್ನು ಪರಿಶೋಧಿಸಕೂಡದೆಂದು ಕೂಗುತ್ತಿದ್ದ ಚಳುವಳಿಯನ್ನು ಈಗ ಗಾಯಕರು ನಿಲ್ಲಿಸಿದಾರೆ.... ಕೂಗಿ ಕೂಗಿ ಶಾರೀರ ತೀರ ಕೆಟ್ಟಿದೆ ಎಂಬುದು ಅವರಿಗೇ ಮನವರಿಕೆಯಾಗಿರಬೇಕು.

* * *

ಮಾದರಿ ಹೋಟಲುಗಳನ್ನು ದೊಡ್ಡ ದೊಡ್ಡ ನಗರಗಳಲ್ಲಿ ಏರ್ಪಡಿಸಲಾಗುತ್ತೆ (ಪ್ರಕಟಣೆ) ಇಂಥ ಹೋಟಲುಗಳಿರಲೇಕೂಡದು, ಎಂದು ಸೂಚಿಸಲು ಈವರೆಗೆ ನೂರಾರು ಮಾದರಿಗಳನ್ನು ಏರ್ಪಡಿಸಿರುವರಲ್ಲಾ.

* * *

ಸ್ಟಾಲಿನ್‌ರ ಜೀವನ ನಿಷ್ಕಾಮ ಕರ್ಮಕ್ಕೆ ಒಳ್ಳೆ ಉದಾಹರಣೆ (ಲೇಖನ) ನಮ್ಮದೆಲ್ಲ ನಿಷ್ಕ್ರಮಣಕರ್ಮಕ್ಕೆ

* * *

ಲಾರ್ಡ್ ಗ್ಲೆನಾರ್ಕಿ ಎಂಬ ಬ್ರಿಟಿಷ್ ಪ್ರಭು ತುತ್ತೂರಿ ಊದಿ ವಾರಕ್ಕೆ ೧೩೦ ರೂಪಾಯಿಗಳು ಸಂಪಾದಿಸುತ್ತಿದಾನೆ.... ನಮ್ಮಲ್ಲೂ ಅನೇಕ ಸಾಮಾನ್ಯರು ಇದೇ ಕಸಬಿನಿಂದ ಹಣ ಸಂಪಾದಿಸಿ ಬಂಗಲಿಗಳನ್ನು ಕಟ್ಟಿಸಿಕೊಂಡಿದಾರೆ.

"ಕೇಸರಿ ನಮಗೆ ದೊರಕುತ್ತಿರುವುದು ಕಾಶ್ಮೀರದಿಂದಲೇ" (ಲೇಖನ) ಪ್ರಕಾಶಂರವರು ಇದನ್ನು ಕೇಳಿದರೆ ಗರ್ಜನೆಮಾಡುತ್ತಾರೆ, ಖಂಡಿತ.

* * *

ಇಂಡಿಯಾದಲ್ಲಿ ೩೦ ಲಕ್ಷಕ್ಕೂ ಮೀರಿದ ಕುರುಡರಿದಾರೆ.... ಅವರೆಲ್ಲರಿಗೂ ವೋಟು ಇರುವುದು.

* * *

ಕಾಲೇಜುಗಳಲ್ಲಿ ನಮ್ಮ ಮಕ್ಕಳು ಏನನ್ನೂ ಕಲಿಯುತ್ತಿಲ್ಲ (ಭಾಷಣ) ಉಪಾಧ್ಯಾಯರ ಉಪನ್ಯಾಸಗಳನ್ನು ಅವರು ಕೇಳುತ್ತಿದಾರೆ, ಅಷ್ಟೆ.

* * *

ಈಚೆಗೆ ಒಬ್ಬರು ಸುಪ್ರಸಿದ್ಧ ಸಾಹಿತಿಗಳು ಹಿಂದಿನಷ್ಟು ಅಸಹ್ಯವಾಗಿಲ್ಲವಂತೆ.... ಅವರು ಕೊಂಚ ತೆಳ್ಳಗಾಗಿರಬಹುದೋ ಏನೋ, ಈಚೆಗೆ.

* * *

ಮದುವೆ ಲಾಟರಿ ಸಮಾನ, ಎಂದಾಗ, ಒಬ್ಬರು ಹೇಳಿದರಂತೆ, ಅದು ಹೇಗರಿ! ಲಾಟರಿಯಲ್ಲಿ ಕೆಲವರಿಗಾದರೂ ಸಂತೋಷ ಬಂದೇ ಬರುತ್ತದೆ.

* * *

ಆಸ್ಪತ್ರೆಗೆ ನೌಕರಿಗಾಗಿ ಬಂದಿದ್ದ ಒಬ್ಬನನ್ನು ಡಾಕ್ಟರ್ ಕೇಳಿದರಂತೆ, 'ಏನೋ! ವಿಷಕ್ರಿಮಿಗಳು ನಿನ್ನ ದೇಹಕ್ಕೂ ಹರಡುತ್ತವೆ ಎಂಬ ಭಯ ಇದೇನೋ ನಿನಗೆ?....' 'ಇಲ್ಲ, ಇಲ್ಲ, ನನಗೆ ನೀವು ಕೊಡುವ ಸಂಬಳ ನನಗೇ ಸಾಲದು; ಇನ್ನು ಅವು ಹೇಗೆ ಬದುಕುತ್ತವೆ, ನನ್ನ ರಕ್ತ ಹೀರಿ?'

* * *

"ನಾನು ರಾಜ!" ಎಂದು ಹೇಳಿದರೆ, ವಿಮಾನ ಕಂಪೆನಿಗಳು ತಕ್ಷಣವೇ ಟಿಕೀಟ್ ಕೊಡುತ್ತಿದಾರಂತೆ, ಪಾಪ, ಆದಷ್ಟು ಬೇಗ ಪರಾರಿಯಾಗಲಿ ಎಂಬ ಉದ್ದೇಶದಿಂದ.

* * *

ಕೊರವಾವಲೋಕನ

ಬಕ್ರೀದ್ ಹಬ್ಬ. ಮಿರುಮಿರುಗುವ ಬಟ್ಟೆಗಳನ್ನು ಹಾಕಿಕೊಂಡು ಮುಸಲ್ಮಾನ ಬಾಂಧವರು ಅಲ್ಲಲ್ಲೇ 'ಈದ್ ಮಿಲಾಪ್' ಮಾಡುತ್ತಿದ್ದರು. ಇದನ್ನು ನೋಡಿ ಕೊಂಡೇ ನಾನು ಕ್ಲಬ್ಬಿಗೆ ಹೋದುದು ಆ ಸಾಯಂಕಾಲ.

ವರಾಂಡಾದಲ್ಲಿ ಕೊರವ ಒಬ್ಬನೇ ಕುಳಿತಿದ್ದ. ಅನಂತ ದಿಗಂತವನ್ನೇ ನೋಡು ತ್ತಿದ್ದ. ಮೆಲ್ಲಗೆ ಹೋಗಿ ಬೆನ್ನು ತಟ್ಟಿದೆ. ಗಾಬರಿಯಿಂದ ಎದ್ದವನೇ ನನ್ನನ್ನು ನೋಡಿ "ಬಾ! ಮಗೂ ಕೂತುಕೋ" ಎಂದ–ಎದುರಿಗೆ ಕುಳಿತೆ. ಅವನನ್ನೇ ಎವೆ ಯಿಕ್ಕದೆ ನೋಡಿದೆ.

ಅವನ ಹಣೆಯಲ್ಲಿ ವಿಭೂತಿ ಹಚ್ಚಿದ್ದುದರ ಅವಶೇಷಗಳು ಅಲ್ಲಲ್ಲೇ ಕಾಣುತ್ತಿ ದ್ದುವು. ನನಗೆ ಪರಮಾಶ್ಚರ್ಯ "ಎಲಾ! ಇವನ! ನಮ್ಮೆದುರಿಗೆ ಜಂಭಮಾಡಿದ್ದೂ ಮಾಡಿದ್ದೇ! ನನಗೆ ಈ ದೇವರು ಆ ದೇವರು ಅಂತ ಏನೂ ಇಲ್ಲ. ನನ್ನ ದೇವರು ನನ್ನ ಹೃದಯದಲ್ಲೇ ಇದ್ದಾನೆ. ಆ ದೇವರ ಮಹಿಮೆ ನನಗೆ ಚೆನ್ನಾಗಿ ಗೊತ್ತು. ಅವ ನಿಗೆ ವಿಭೂತಿ ಹಣೆ ಎಂದೇನೂ ಆಶೆಯಿಲ್ಲ—ನಾಮದ ಲಲಾಟದಿಂದೇನೂ ಸಂತೋಷ ಗೊಳ್ಳುವುದಿಲ್ಲ–ಮುದ್ರೆಯ ಅಲಂಕಾರದಿಂದ ಮೊಗವನ್ನು ಮೋಹಗೊಳ್ಳುವುದಿಲ್ಲ. ಈ ಮುಖ ಸಂಕೇತಗಳೆಲ್ಲಾ ಪಾಮರರಿಗೆ–ನನ್ನಂತಹ ಆತ್ಮಜ್ಞಾನಿಗಲ್ಲ"

ಹೀಗೆಲ್ಲಾ ಜಂಭ ಕೊಚ್ಚುತ್ತಿದ್ದಾತ—ಈವತ್ತು ಬಕ್ರೀದ್ ದಿನ–ಹಣೆಗೆ ಏಕೆ ವಿಭೂತಿ ಇಟ್ಟ ಅಂತ ನನಗೆ ಆಶ್ಚರ್ಯ.

ಒಂದು ತಟ್ಟೆ ಗರಮಾಗರಂ ಮಿಂದಿರ ಪರ್ಪನ್ನು ತರಿಸಿ ಅವನೆದುರಿಗಿರಿಸಿ ಧೈರ್ಯವಾಗಿ ದೈನ್ಯದಿಂದ ಕೇಳಿದೆ.

"ಮಹಾ ಸ್ನೇಹಿತನೇ–ನಿನ್ನ ಹಣೆಯ ಮೇಲಿನ ವಿಭೂತಿ ಅವಶೇಷದ ಇಂಗಿತ ವೇನು ?" ಎಂದು.

ಮಹಾ ಸ್ನೇಹಿತನು ನಸುನಗುತ ಹೇಳಿದ "ಕೇಳು ವತ್ಸಾ. ಈ ದಿನ ನಮ್ಮ ಆಂಗ್ಲೇಯರು ಆಸ್ಟ್ರೇಲಿಯನ್ನರ ಮೇಲೆ ಕ್ರಿಕೆಟ್‌ನಲ್ಲಿ ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಧ್ಯವಾಗದೆ ಇದ್ದ "ವಿಭೂತಿ"ಯನ್ನು ಗಳಿಸಿದರು. ಆ ಸುಖಸನ್ನಿವೇಶದ ನೆನಪಿ ಗಾಗಿ ಆ ವಿಭೂತಿಯನ್ನು ಹಣೆಗೆ ಬೆಳಿಗ್ಗೆ ಪೇಪರ್ ಓದಿದಾಗ ಹಚ್ಚಿದೆ." ಅಂದ.

ಕೊರವ ಆಂಗ್ಲೇಯರ ಪಕ್ಷಪಾತಿ ದಿಟ! ಆದರೆ ಇಷ್ಟರ ಮಟ್ಟಿಗೆ ಅವನ ಹಣೆಯು ತನಕ ಪಕ್ಷಪಾತ ಹರಡಿದ್ದನ್ನು ಕಂಡಿದ್ದು ಅವತ್ತೇ ನಾನು.

*   *   *

ಗೋದಾವರಿಯಲ್ಲಿ ಹುಚ್ಚು ಪ್ರವಾಹ ಹರಿಯಿತು ನೋಡಿ. ಕಾವೇರಿಯಲ್ಲಿ ಆನೆಯೊಂದು ತೇಲಿಬಂದಿತು ನೋಡಿ ಅಂತಹಾ ದಿನಗಳಲ್ಲೊಂದು. ಸಾಯಂಕಾಲ ಕೊರವ ಕ್ಲಬ್ಬಿನಲ್ಲಿ ತನ್ನ ಒಡ್ಡೋಲಗವನ್ನು ನಡೆಸುತ್ತಿದ್ದಾನೆ. ಆಗಿಂದಾಗ್ಯೆ ತನ್ನ ಬೆರಳುಗಳ ಮಧ್ಯೆ ಇದ್ದ ಬಿಲ್‌ಕಾಗದದಿಂದ ಮುಖಕ್ಕೆ ಗಾಳಿ ಬೀಸಿಕೊಳ್ಳುತ್ತಿದ್ದಾನೆ. ಎಲ್ಲರ ಮುಖವೂ ಸ್ವಲ್ಪ ಮಟ್ಟಿಗೆ ಕೆಂಚೇರಿದೆ. ಅಷ್ಟು ಶಖೆ ಆ ಕ್ಲಬ್ಬಿನಲ್ಲಿ ಆ ಸಾಯಂಕಾಲ.

ಅಷ್ಟು ಹೊತ್ತಿಗೇ ನಾನೂ ಕ್ಲಬ್ಬಿಗೆ ಹೋಗಿ ಈ ಕೂಟದ ದೃಶ್ಯವನ್ನು ಪಡೆದುದು. ಆಗಲೇ ಕೊರವ ಕೂಗಿ "ಬಾ! ಮಗು ಕೂತುಕೋ—ಡೇ! ಬಾಯ್ ಒರ್ ನಾಗಾಲಿ ಕೊಂಡುವಾ" ಎಂದ. ನಾನಂದೇ "ಕ್ಷಮಿಸು ಕೊರವ. ಹುಲ್ಲುಗಾವಲಿನ ಮೇಲೆ ತಣ್ಣಗೆ ಹೋಗಿ ಕೂತುಕೊಳ್ಳುತ್ತೇನೆ" ಎಂದು.

"ನಿನಗಿರೋ ಜಾಣತನ ನಮಗಿಲ್ಲವೇನೋ? ಈ ಶಕೇಲಿ ಇಲ್ಲಿ ಏಕೆ ಕೂತಿದ್ದೀವಿ ಅಂತ ತಿಳಿದುಕೊಂಡಿದ್ದೀ! ನಮಗೆ ಹುಲ್ಲು ಗಾವಲಿನ ಮೇಲೆ ಕೂರಲು ತೋರಲಿಲ್ಲವೆಂದೇ? ಇಲ್ಲೇನೋ ಶಕೆ. ದಿಟ. ಆದರೆ ಮೇಲೆ ಆಕಾಶದಲ್ಲಿ, ಕೂಡಿ ಬರುತ್ತಿವೆ ಕಾರ್ಮೋಡಗಳು. ಚುನಾವಣಾ ಸಮಯದ ಟ್ಯಾಕ್ಸಿಗಳಂತೆ. ಇನ್ನೇನು ಎರಡು ನಿಮಿಷ! ಮಳೆ ಭರ್ಜರಿಯಾಗಿ ಬೀಳುತ್ತೆ. ಆ ಕ್ಷಣಿಕಕ್ಕಾಗಿ ಇಲ್ಲಿಂದ ಅಲ್ಲಿಗೆ-ಅಲ್ಲಿಂದ ಇಲ್ಲಿಗೆ ಪರದಾಡುವುದು ಏತಕ್ಕೆ ಎಂದು ಇಲ್ಲೇ ಕುಳಿತೆವು ಬಾ ಕುಕ್ಕರಿಸು" ಎಂದ.

ಇವನ ಮಾತಿನ ನ್ಯಾಯ ನನಗೆ ಅರ್ಥವಾಗಲಿಲ್ಲ. ಆದರೆ ಅವನ ಬಾಯಿಗೆ ಹೆದರಿ ಅಲ್ಲೇ ಕುಳಿತೆ. ಅದೇನು ಮಾಯವೋ ನೋಡಿ ಎರಡೇ ನಿಮಿಷದಲ್ಲಿ ಭರ್ಜರಿ ಮಳೆ ಹೊಡೆದೇಬಿಡ್ತು. ನಾನು ಹುಬ್ಬೆಬ್ಬಿಸಿದೆ ಆಶ್ಚರ್ಯದಿಂದ.

ಕೊರವ ಅದನ್ನು ನೋಡಿದ ಅಂತ ಕಾಣುತ್ತೆ. ಆಗಂದ "ನೋಡು ಮಗು. ಮಳೆ ಬೀಳುವುದೂ ರಾಜಕೀಯವೂ ಒಂದೇ ತರಹಾ. ಬಲು ಶಕೆಯಾಯ್ತು ಅನ್ನು ಮಳೆಗಾಲದಲ್ಲಿ. ಕೂಡಲೇ ಭಾರೀ ಮಳೆ ಬೀಳೋದು ಖಂಡಿತ. ಹಾಗೇ, ರಾಜಕೀಯದಲ್ಲಿ ಒಬ್ಬಾತ ಬಲು ಬಿಸಿ ಬಿಸಿಯಾದ ಅನ್ನು ಮೊಸಾದಿಕ್‌ನ ಹಾಗೇ! ಷೇಕ್ ಅಬ್ದುಲ್ಲಾ ಹಾಗೇ! ಕೂಡಲೇ ಏನೋ ಅನಾಹುತ ಹಿಂದೇನೇ ಕಾದೇ ಇರುತ್ತೆ. ಇದಕ್ಕೆ ನೀನು ಆಶ್ಚರ್ಯಪಡಬೇಕಾಗಿಲ್ಲ." ಅಂತ ವಿವರಣೆ ಇತ್ತ.

ನನ್ನ ನಾಲಿಗೆ ತುದೀಗೆ ಬಂದಿತ್ತು. ಈ ನಿಯಮ ಸಂಸಾರದಲ್ಲಿ ವ್ಯತಿರಿಕ್ತ ಅಲ್ಲಿ ಭಾರೀ ಮಳೆ ಕಣ್ಣೀರಿಂದ ಹರಿದ ಮೇಲೇನೆ, ವಾತಾವರಣ ಬಿಸಿ ಬಿಸಿಯಾ ಗೋದು ಗಂಡನಿಗೆ ಅಂತ ಹೇಳೋಣ ಅಂತ. ಆದರೆ ನನ್ನ ಗುಟ್ಟನ್ನು ಇವ ಕ್ಲಬ್ಬಿನ ಬಯಲಿಗೆ ಹಾಕ್ತಾನೇನೋ ಎಂದು ಹೆದರಿ ಸುಮ್ಮನಾದೆ.

* * *

ಸೊಳ್ಳೆಗಳ ಮದುವೇಲಿ ಸೊಳ್ಳೆಗಳು ಶೋಭಾನೆ ಹಾಡುತ್ತೆ ಅಂತ ಇಟ್ಕೊ ಕೊಳ್ಳೋಣ. ಆ ಶೋಭಾನೆ ಹಾಡನ್ನು ಎಲ್ಲ ಸೊಳ್ಳೆಗಳೂ ಒಂದೇ ರಾಗದಲ್ಲಿ ಹಾಡುತ್ತೆ ಅಂತ ಭಾವಿಸೋಣ. ಆ ಮದುವೇಲಿ ನಾವು ಕೂತಿದ್ದೆವು ಎಂದು ಇಟ್ಕೊ ಕೊಳ್ಳೋಣ. ಆಗೇನೆನಿಸುತ್ತೆ? ಮೈ ಪರಚಿಕೊಂಡು ಓಡಿ ಹೋಗೋಣ ಅಂತ. ಇದನ್ನೋದುವ ನಿಮಗೇನನಿಸುತ್ತೆ? ಇದನ್ನು ಬರೆದವ ಎದುರಿಗೆ ಸಿಕ್ಕಿದರೆ ಕಿಂಗ್ ಕಾಂಗ್ ಕಾಲಿಂದ ಹೈ ಕಿಕ್ ಒದೆಸೋಣ ಅಂತ ಅನ್ನಿಸುತ್ತೆ. ಹಾಗೆನಿಸುತ್ತಿತ್ತು ನಮಗೆಲ್ಲಾ ಶುಕ್ರವಾರ ಸಂಜೆ. ಏಕೆಂದರೆ ಕ್ಲಬ್ಬಿನಲ್ಲಿ ಕಿರುಕಲು ದನಿಯ ಸೈಂಧವ ನೊಬ್ಬ. ತಾನು ವರಮಾನ ತೆರಿಗೆಯ ಅಧಿಕಾರಿಯಾಗಿ ಯಾವ ಯಾವ ರೀತಿಯಲ್ಲಿ ಯಾರ್‍ಯಾರನ್ನು ಬುಟ್ಟಿಗೆ ಹಾಕಿದೆ ಎಂಬ ಮಸಲತ್ತನ್ನೆಲ್ಲಾ ಗುಂಯ್ ಧನಿಯಲ್ಲಿ ಚಿತ್ರಿಸುತ್ತಿದ್ದ. ಹಲ್ಕಾ ಕೆಲಸ ಮಾಡಬೇಕಾಗೋದು ವಿಧಿನಿಯಮ ಆಗಿರಬಹುದು. ಆದರೆ ಅದನ್ನೂ ಬಹಿರಂಗವಾಗಿ ಹೇಳಿಕೊಳ್ಳಬೇಕೇ? ಕಳಕೊಂಡ ಮೇಲೆ ಹುಡುಕ ಬಾರದು ಅಂತಾರೇ? ಹುಡುಕೋದು ಅಲ್ಲದೇ ಹೇಳಿಕೊಳ್ಳೋದು ಕೂಡ ಆಗ ಬೇಕೆ? ಅಂತ ನಾವೆಲ್ಲಾ ಅಂದುಕೊಳ್ಳುತ್ತಿದ್ದೆವು.

ಆಗ ಕೊರವ ಬಂದ. ತೆರೆ ತೆಗೆದ ಮೇಲೆ ಹೆಣ್ಣಿನ ಕಣ್ಣಿಗೆ ಕಂಡ ಗಂಡನಂತೆ ನಮಗೆ ಕಂಡ. ಬಂದವನೇ ಕಿಲಕಿಲದನಿಯ ಸೈಂಧವನನ್ನು ನೋಡಿದ. ಅವನ ಮಾತಿನ ಜಾಡನ್ನು ಮೂರೇ ನಿಮಿಷದಲ್ಲಿ ಕಂಡುಕೊಂಡ.

ವೈತರಿಣಿ ಎಂದು ಕೇಳಿದ್ದೀರಾ ಅಂದ ಹಠಾತ್ತಾಗಿ. ಕಿರುಕಲದನಿಯವ "ಹ್ಞೂ, ಬೊಂಬಾಯಿನ ಹತ್ತಿರ ನೋಡಿದ್ದೇನೆ' ಎಂದ.

"ಆ ವೈತರಿಣಿ ಅಲ್ಲಾ! ದೊಡ್ಡ ವೈತರಿಣಿ ಈ ಲೋಕ ಬಿಟ್ಟ ಮೇಲೆ ನಿಮ್ಮಂತ ಹವರಿಗೆ ಮೊದಲು ಸಿಕ್ಕುವ ನದಿ" ಎಂದ ಕೊರವ.

ಹಾವನ್ನೇ ನೋಡುವ ಕಪ್ಪೆಯಂತೆ, ಕಿರುಕಲ ದನಿಯವ ಕೊರವನ ಮುಖ ವನ್ನೇ ಎವೆ ಇಕ್ಕದೆ ನೋಡಹತ್ತಿದ.

ಕೊರವ ತನ್ನ ನಾಲಿಗೆಯನ್ನೇ ಝಳಪಿಸಿದ. ಮುಂದುವರೆದ.

ಆ ದೊಡ್ಡ ವೈತರಿಣಿ ಹತ್ತಿರವೇ ಒಂದು ಕಾಫೀ ಹೋಟಲಿದೆ. ಅದರಲ್ಲಿ ನಿಮಗೆಲ್ಲಾ ಸ್ಥಳ ಕಾದಿರಿಸಿದ್ದಾರೆ. ಗರಮಾಗರಂ ದೋಸೆ ತಂದಿಡ್ತಾರೆ. ತಿನ್ನುಕ್ಕೇ ಅಂತ ಕೈಹಾಕಿದರೆ ಬೆರಳನ್ನೇ ಆ ದೋಸೆ ಕಚ್ಚುತ್ತೆ. ಘಮ ಘಮಿಸುವ ಕಾಫೀ ತಂದಿಡ್ತಾರೆ. ನಾಲಿಗೆ ಚಪ್ಪರಿಸಿಕೊಂಡು ಲೋಟಾ ಎತ್ತಿದರೆ--ಲೋಟಾಕ್ಕೆ ತಳವಿಲ್ಲದ್ದು ಕಾಣುತ್ತೆ. ಕಾಫೀ ಸುರಿದೇಹೋಗುತ್ತೆ. ಅಂತಹ ಜಾಗದಲ್ಲಿ ನಿಮಗೆ ಖಾಯಂ ಸ್ಥಳ ಖಂಡಿತ" ಎಂದ

"ಯಾಕೋ" ಎಂದ ಕಿರುಕಲ ದನಿಯವ ಬೆವರುತ್ತಾ.

"ಯಾಕೇ ಅಂದರೆ. ಬಂದ ವರಮಾನದ ಮೇಲೆ ತೆರಿಗೆ ಹಾಕಿದರೆ ಒಂದು ತರಹ. ನೀವುಗಳೆಲ್ಲಾ ಹೆದರಿಸಿ ಬೆದರಿಸಿ ಬಾರದ ವರಮಾನದ ಮೇಲೆ ತೆರಿಗೆ ಹೇರಿಸುತ್ತೀರಲ್ಲಾ ! ಹಾಗೆ ಮಾಡಿದೆವು ಅಂತ ನಾಚಿಕೆ ಇಲ್ಲದೆ ಹೇಳಿಕೊಳ್ಳುತ್ತೀರಲ್ಲಾ" ಅದಕ್ಕೇ! ಅಂದ ಕೊರವ.

ನಾವೆಲ್ಲಾ ಚಪ್ಪಾಳೆ ತಟ್ಟೋಣ ಎಂದುಕೊಂಡೆವು. ಆದರೆ ಕಿರುಕಲ ದನಿಯವನ ಹತ್ತಿರ ಮುಂದೆ ಸಿಕ್ಕಿಹಾಕಿಕೊಂಡರೆ!! ಎಂಬ ದೂರದೃಷ್ಟಿಯಿಂದ ತೆಪ್ಪಗಾದೆವು.



ಕಸುಬಿಗೆ ತಕ್ಕ ಉಡುಪು.

ಗುಮಾಸ್ತೆ ಗುಂಡಣ್ಣ

—o—

ಗುಮಾಸ್ತೆ ಗುಂಡಣ್ಣ ಬಹಳ ಸಾಚಾ ಮನುಷ್ಯ. ಒಂದು ದುರ್ನಡತೆ ಇಲ್ಲ; ಒಂದು ದುರಚಾಳಿಇಲ್ಲ. ಅಷ್ಟೇಕೆ ಇಂದಾಗೆ ಗುಮಾಸ್ತ ಆಗಿದ್ದುಕೊಂಡೂ ಕೂಡ, ನಶ್ಯಾನ ಮೂಗಿಗೆ ಮುಟ್ಟಿಸುತ್ತಲೂ ಇರಲಿಲ್ಲ ಅಂದ ಮೇಲೆ ಅವನೆಂಥ ನಿಯತ್ತಿನ ಮನುಷ್ಯ ಅನ್ನೋದನ್ನ ನೀವೇ ಊಹಿಸಿಕೋಬಹುದು.

ಅಂಥಾ ಗುಂಡಣ್ಣನಿಗೆ ಒಂದೇ ಒಂದು ಸಣ್ಣ ಚಟ—ಮಾತೆತ್ತಿದರೆ ಬೆಟ್ (Bet) ಕಟ್ಟೋದು. ತಾನು ಹೇಳಿದ್ದನ್ನ ಯಾರಾದರೂ ವಿರೋಧಿಸಿದರೆ ಸಾಕು, ಬೆಟ್ ಅಂತ ಅರಚಿ ಅವರ ಬಾಯಿ ಬಡಿಯೋನು. ಸರಿ ತಪ್ಪು, ಸೋಲು, ಗೆಲುವುಗಳ ಪರಿವೆಯೇ ಇಲ್ಲ ಆ ಮಹಾನುಭಾವನಿಗೆ. ಚೌಡಯ್ಯನವರು ಮೃದಂಗದ ಮಾಸ್ತರು ಅಂತ ಯಾರ ಹತ್ತಿರವೋ ಹಟಕಟ್ಟಿ ಮೊನ್ನೆ ತಾನೇ ಮೂರು ರೂಪಾಯಿ ಕಳೆದುಕೊಂಡಿದ್ದ.

ಗುಂಡಣ್ಣನ ಈ ಹಾಬಿ ವಿಚಾರ ನಮ್ಮೂರ ಅಮಲ್ದಾರರು ಅಂಪಯ್ಯನವರ ಕಿವೀವರೆಗೂ ಹೋಯ್ತು. ಐಸ್‌ಕ್ರೀಮ್ ನಂಥ ಅವರ ಮನಸ್ಸು ಕರಗಿಹೋಯಿತು. ಗಿಡವಾಗಿ ಬಗ್ಗದ್ದನ್ನ ಮರವಾದ ಮೇಲೆ ಬಗ್ಗಿಸಬಹುದು ಎಂತನ್ನುವವರಲ್ಲಿ ಅವರೂ ಒಬ್ಬರು. ಗುಂಡಣ್ಣನನ್ನು ತಮ್ಮ ಬಂಗಲೆಗೆ ಕರೆಸಿಕೊಂಡು ಬುದ್ಧಿವಾದ ಹೇಳಿದರು. ಹಟಕಟ್ಟಿ ಹಾಳಾದವರ ಹಾಲಿ ಲಿಸ್ಟನ್ನು ಅವನ ಅವಗಾಹನೆಗೆ ತಂದರು. "ಬೇಡಯ್ಯಾ ಈ ದುರಭ್ಯಾಸ ಬಿಟ್ಟುಬಿಡು" ಅಂತ ಬೇಡಿಕೊಳ್ಳೋದೊಂದೇ ಬಾಕಿ ಉಳಿದಿದ್ದಿದ್ದು. ಅಮಲ್ದಾರರ ಅಹವಾಲನ್ನು ಕೇಳಿ ಕೂಡ ಗುಂಡಣ್ಣನಲ್ಲಿ ಕೊಂಚವೂ ವ್ಯತ್ಯಾಸ ಕಂಡು ಬರಲಿಲ್ಲ. ತನ್ನ ಪಟ್ಟನ್ನೇ ಬಲವಾಗಿ ಹಿಡಿದಿದ್ದ ಗುಂಡಣ್ಣ. ಇದುವರೆಗೂ ಮೂಕನಂತೆ ಮಾತಾಡದೇ ನಿಂತಿದ್ದವನು ಈಗ ಇದ್ದಕ್ಕಿದ್ದ ಹಾಗೆ ಬಾಯಿ ಬಿಟ್ಟ. "ಸಾರ್, ತಮ್ಮಲ್ಲಿ ಒಂದೇ ಒಂದು ಕಡೆಯ ಬೆಟ್. ತಮ್ಮ ಬಲಭಾಗದ ಎದೇಲಿ ಪಕ್ಕೆ ಮೇಲೆ, ಅಂಗೈ ಅಗಲದ ಗರುಡ ಮಚ್ಚೆ ಇದೆ ಸಾರ್" ಅಂದ.

ಅಂಪಯ್ಯನವರಿಗೆ ಆಶ್ಚರ್ಯವೋ ಆಶ್ಚರ್ಯ. ಹೊಟ್ಟೆ ಹುಣ್ಣಾಗುವಷ್ಟು ನಕ್ಕರು. ನಲವತ್ತು ವರುಷಗಳಿಂದ ತಾವೇ ಕಾಪಾಡಿಕೊಂಡು ಬಂದಿರೋ ಈ ಕೃಶ ದೇಹದಲ್ಲಿ ತಮಗೇ ತಿಳೀದ ಹಾಗೆ ಒಂದು ಮಚ್ಚೆ ಇದೆ ಅನ್ನೋದು ಯಾರಾದರೂ

ನಂಬೋ ಮಾತೆ? ಅದೂ, ಹಾವು ಅಂದರೆ ನಾಗರಪಂಚಮಿ ಮಾಡುವ ಹೆಂಗಸರಿಗಿಂತಲೂ ಹೆಚ್ಚು ಹೆದರಿ ಹಣ್ಣು ಹಣ್ಣಾಗೋ ತಮಗೆ—ತಮ್ಮ ಎದೇ ಮೇಲೆ—ಗರುಡ ಮಚ್ಚೆ ಅಂದರೆ?

"ನಂಬೋಕೇ ಸಾಧ್ಯವಿಲ್ಲಯ್ಯ" ಅಂದರು ಶ್ರೀಮಾನ್ ಅಂಪಯ್ಯನವರು.

"ಇಲ್ಲಾ ಸಾರ್, ನೋಡಿ ಬೇಕಾದರೆ! ತಾವು ಅನ್ಯಥಾ ಭಾವಿಸದೆ ಇದ್ದರೆ, ಐದೈದು ರೂಪಾಯಿ ಬೆಟ್ ಸರ್!" ಅಂದ ಗುಂಡಣ್ಣ.

ಗುಂಡಣ್ಣ—ಸರ್ಕಾರದ ಕೆಲಸಗಳನ್ನೆಲ್ಲಾ ನಿರ್ವಹಿಸೊ ಸತ್ಪ್ರಜೆ—ಅವನೇ ಇಷ್ಟು ಧೈರ್ಯವಾಗಿ, ತಾನೇ ಅವರಿಗಿಂತ ಚೆನ್ನಾಗಿ ಅವರ ಎದೆ ನೋಡಿದ ಹಾಗೆ ಬೆಟ್ ಕಟ್ಟಿದ್ದನ್ನ ನೋಡಿ ಅಂಪಯ್ಯನವರಿಗೆ ಅನುಮಾನ ಮೂಡಿ ಬಂತು. ಹಣೆ ಮೇಲೆಲ್ಲಾ ನೆರಿ ಕಾಣಿಸಿಕೊಂಡವು. ಹುಬ್ಬುಗಳು ತಾವೇ ಮೇಲಕ್ಕೆ ಹೋದವು. ಮೂಗು ಬೆರಳಿನ ಮೇಲೆ ಇಳಿಬಿತ್ತು—ಬೆಟ್ ಒಪ್ಪಿ ಕೊಂಡರು.

ಅನುಮಾನ ತಡೆಯೋಕೆ ಆಗಲಿಲ್ಲ ಅಂಪಯ್ಯನವರಿಂದ. ನೋಡೇಬಿಡೋಣ ಅಂತ ಹೇಳಿ, ಷರ್ಟು ಬಿಚ್ಚಿ ಕಣ್ಣ ಮೇಲೆ ಕಣ್ಣಿಟ್ಟು ನೋಡುತ್ತಾರೆ. ಮಚ್ಚೆಯೂ ಇಲ್ಲ; ಮಣ್ಣು ಇಲ್ಲ. ಗುಂಡಣ್ಣ ಸೋತೆ ಅಂತ ಒಪ್ಪಿಕೊಂಡ.

"ನೋಡಿದೆಯೇನಯ್ಯಾ! ನಿನಗೆ ತಿಳಿಯದ ವಿಷಯದಲ್ಲಿ ಹಟತೊಟ್ಟು, ಕಂಡ ಹಾಗೆ ಅನ್ಯಾಯವಾಗಿ ಐದು ರೂಪಾಯಿ ಕಳೆದುಕೊಂಡ್ಯಲ್ಲಾ! ಉಂಡಹಾಗಲ್ಲಾ ತಿಂದಹಾಗಲ್ಲಾ!" ಅಂತ ರಾಗ ಎಳೆದರು ಅಂಪಯ್ಯನವರು ವಿಜಯದ ಠೀವಿಯಿಂದ, ಬನೀನನ್ನು ಏರಿಸುತ್ತಾ.

"ಅಯ್ಯೋ, ಪರವಾಗಿಲ್ಲ ಸಾರ್! ಅಲ್ಲಿನೋಡಿ, ಬಾಗಿಲ ಹತ್ತಿರ ಬಗ್ಗಿ ಬಗ್ಗಿ ನೋಡುತ್ತಿದ್ದಾರಲ್ಲಾ ಭೀಮರಾಯರು, ಅವರ ಕೂಡ ತಮ್ಮ ಕೈಯಿಂದಲೇ ತಮ್ಮ ಬನೀನು ಬಿಚ್ಚಿಸ್ತೇನೇಂತ ಹೇಳಿ ಹತ್ತು ಹತ್ತು ರೂಪಾಯಿ ಹಟಕಟ್ಟಿದ್ದೆ ಸಾರ್!" ಅಂತ ಗುಂಡಣ್ಣ ಅಂದಾಗ ಆಮಲ್ದಾರ್ ಅಂಪಯ್ಯನವರ ಮುಖ ಬಿ....ಬಿ....ಬಿ.... ಬ್ಬಿಳಿಚಿಕೊಂಡು ಹೋಯಿತು.

ತಾವು ಗೆದ್ದ ಬೆಟ್‌ನ ಬಾಬ್ತು ಬರಬೇಕಾದ ಐದು ರೂಪಾಯಿಗಳನ್ನ ಅವರು ಕೇಳಲೇ ಇಲ್ಲ.

ಹೊ. ನಂ. ಪ.

[ಕದ್ದರೆ, ಕದ್ದೆವು ಅಂತ ಹೇಳಿಕೊಂಡರೆ ಚಂದ ಅಲ್ಲವೇ, ಲೇಖಕರೇ?]
ಸಂ.

ಒಂದು ಮೂ(ಲ)ಕ ಅರ್ಜಿ

ಸ್ವಾಮಿ ಸಂಪಾದುಕ ಮಾತ್ಮರೆ,

ನಮ್ಮಾ ಮೂಕು ಅರ್ಜಿಗೆ, ದಯವಿಟ್ಟು ತಮ್ಮ ಪತ್ರಿಕೆಯ ನಾಲಗೆಯನ್ನು ಚಾಚುವ ಕೃಪೆತೋರಿಸುವಂಥವರಾಗಬೇಕಾಗಿ ಅಪೇಕ್ಷಿಸುತ್ತೀವೆ.

ವಿಚಾರವೇನಂದ್ರೆ, ಈಚೀಚೆಗೆ ನೋಡಿ ಅತಿಯಾಗಿ ಹಬ್ಬತೊಡಗಿದ ಪಿಡುಗು, ಸಾರ್ವತ್ರಿಕ ಜಾಡ್ಯ (ಅದನ್ನು ತಡೆಗಟ್ಟಲು ತಾವು ದೊಡ್ಡ ಮನಸ್ಸುಮಾಡಿ ನೆರವು ನೀಡಬೇಕೆಂದೇ ವಿನಂತಿಯಿರೊದಿಲ್ಲಿ.)—ಮೇಷ್ಟರುಗಳ ಕುಲಗೋತ್ರದ ಮೇಲೆ ಗಧಾ ಪ್ರಹಾರಮಾಡುತಿರೋದನ್ನು, ನೆನಸಿಕೊಂಡು-ನೋಡಿಕೊಂಡು-ಅಲ್ಲ ಅನುಭವಿಸಿ ಕೊಂಡು, ಈ ಪತ್ರ ಬರೀತಿದೀನಿ....

ಅಲ್ಲಾಂದ್ರೆ-ಈ ಸಾಯಿತಿಗಳಿಗೆ ನಮ್ಮಗಳ ಮೇಲೆ ಇಷ್ಟು ಸಿಟ್ಟು ಯಾಕಂತ ನನಗೆ ಬೇರೆ ಅರ್ಥವಾಗುತ್ತಿಲ್ಲ. ನಾವೇನು ಅಪರ ಮನೆಗೆ ಹಾಲು ಕೊಡುವಾಕೆಯ ಎಮ್ಮೆಗೆ ನೀರು ಕುಡಿಸಿದೆವೆಯೆ?....ನೋಡಿ, ಆ ಪುಟ್ಟಪ್ನೋರು 'ಮೀನಾಕ್ಷಿ ಮನೆ ಮೇಷ್ಟ್ರು'ನ್ನ ಬರ್‌ದಾಗ್ಲೇ ನನ್ನ ಭಾವಮೈದ ಸುಬ್ರಾಮುಗೆ ಮನೇ ಪಾಠದಿಂದ ಬರು ತ್ತಿದ್ದ ಖಾಯಂ ಆದಾಯ ತಿಂಗಳಾ ಹದಿನಾಲ್ಕೂವರೆ ರೂಪಾಯಿ ತಪ್ಪಿಹೋಯಿತು! ಪಾಪ, 'ಮೀನಾಕ್ಷಿ' ಅಂತ ಅವನ ಶಿಷ್ಯೆಗೆ ಹೆಸರಿದ್ದುದ್ದೇ ಇದಕ್ಕೆ ಏಕಮಾತ್ರ ಕಾರಣ ಗೊತ್ತೆ?....ಅನಂತರ ಕೃಷ್ಣಾಯರು 'ಜ್ವಾಲಾಮುಖಿ'ಯಾದಾಗ್ಲಂತೂ ಆ ಹಿಂದೀ ಮೇಷ್ಟ್ರು ಭೀಮಾ ಜ್ಯೋಸರಿಗೆ ಎಷ್ಟು ಕಷ್ಟಾವ್ಯುಯ್ತೂಂತೀರಿ-ಮನೆ ಪಾಠ ತಪ್ಪಿಹೋಗಿ!........ಕಟ್ಟಿಮನೆಯವರು ಆ ಮೋಹದ ಬಲೆಯನ್ನು ಬೀಸಿದರೋ ಇಲ್ಲವೋ-ಭಗ್ವಂತಾ!-ಮನೇ ಮೇಷ್ಟರಷ್ಟು ಅಲ್ಲ-ಪ್ರೈವೇಟಾಗಿ ಎಂದೋ ಪಿಟೀಲ್ ಕಲಿತು (ಮರೆತೂ) ಹೋಗಿದ್ದ ನನ್ನ ಖಾಸಾ ತಮ್ಮಂಗೇ ಡಿಸ್‌ಮಿಸ್ ಆಯ್ತು-ಆ ಲಿಂಗಾಯತ ಲಿಂಗಣ್ಣಗೌಡರ ಮನೆಯ ಟ್ಯೂಶನ್ ಹುದ್ದೆಯಿಂದ!....ಇಷ್ಟಕ್ಕೆಲ್ಲಾ ಮುಗಿದುಹೋಯಿತೂಂತೀರ? ಈ ಹನುಮನ ಹಾವಳಿ? (ಅಯ್ಯೋ ಇದರ ಮನೆ ಹಾಳಾಗ!) ಇಲ್ಲ, ಇದೇ ಈಗ ಮೊನ್ನೆ ಮೊನ್ನೆ ಆ ತ.ರಾ.ಸು 'ಬಿಡುಗಡೆಯ ಬೇಡಿ' ನ್ನ ಗಡಿಬಿಡಿಯೊಳಗೆ ಬರೆದರೊ ಇಲ್ಲವೊ-ಸ್ವಾಮಿ, ನಮ್ಮಗತಿ ಝಾಡಿಸಿಹೋಯ್ತು, ...ತಿಂಗಳಿಗೆ ತಿಂಗಳಿಗೆ ಕೈಗೆ ಬರುತ್ತಿದ್ದ ಮೂವತ್ತೆರಡು ರೂಪಾಯಿಗೆ ಬಿತ್ತು—ಥಪ್ಪನೆಯ ಬೇಡಿ ಉಕ್ಕಿನದು!

ಸ್ವಾಮಿ, ನಮ್ಮದು ಯಾವ ತಪ್ಪು ಇಲ್ಲದೆ ಇದ್ದರೂ ಈ ರೀತಿ ಅನ್ಯಾಯವಾಗುಕ್ಕೆ ಆ ಲೇಖಕರುಗಳೇ ಕಾರಣೀ 'ಭೂತ' ಗಳಾದ್ದರಿಂದ ದಯವಿಟ್ಟು ಈ ಭಯಂಕರ ಜಾಡ್ಯವನ್ನ ಕೂಡಲೇ ನಿಲ್ಲಿಸಲು ತಕ್ಕ ಹೆಲ್ತ್ ಇನ್ಸ್‌ಪೆಕ್ಟ್ರು ತಾವೇಂತ್ಲೇ ನಂಬಿ ಕೊಂಡು, ತಮ್ಮ ಮೊರೆಹೊಕ್ಕಿದೇವೆ. ರಕ್ಷಿಸೋಭಾರ ತಮ್ಮ (ಪೇಪರಿನ ಹಾಳೆಗಳ) ಮೇಲಿನದು.

ಈ ಒಡುಗು ಹೀಗೇ ಇನ್ನೂ ಎಷ್ಟೆಷ್ಟು ದೂರ ಹಬ್ಬಿ ಎಷ್ಟೆಷ್ಟು ಜನ ಮೇಷ್ಟ್ರುಗಳ ಕೈಗೆ ಚಿಪ್ಪುಕೋಲು ದಯಪಾಲಿಸುತ್ತೋ–ಆ ಭಗವಂತನಿಗೇ ಅರ್ಪಿತ!

ಇಂತು ಕಿಡಿಕಿಡಿಯಾದ

(ಅ) ಶಾಂತರಾಮ್,

ಮನೆ ಮೇಷ್ಟ್ರುಗಳ ಸಂಘದ ಶೋಕಾಧ್ಯಕ್ಷ.

★

ಐವತ್ತೈದು ವರ್ಷ

ವಿಮೆಯೇನೋ ಇಂದಿಗೆ ಸಂದಿತು
ವಯಸೇನೋ ತುಂಬುತ ಕಂದಿತು
ಮುಪ್ಪಿನ ಕಾಲಕೆ
ಕೈ ನೆರವಾಗಲಿ
ಎಂದು ಮಾಡಿದ ಹಣವೂ ಬಂದಿತು.

* * *

ಮುಪ್ಪಿನ ಯೋಚನೆ ಮಾಡಿದೆ ಬಾಲ್ಯದಿ
ಒಪ್ಪದ ಯೋಜನೆ ಮಾಡಿದೆ ಬಾಲ್ಯದಿ
ಕಾಸನ್ನೆಲ್ಲಾ ಕೂಡಿಸಿಟ್ಟು
ವಿಮೆಯನ್ನೆಲ್ಲಾ ಮಾಡಿ ಇಟ್ಟೆ!
ಆದರೆ
ಸಪ್ಪೆಯಾಯ್ತಲ್ಲೇಕೋ ರೂಪಾಯಿ !!

ಆಗಸ್ಟ್–೧೫

——o——

ಅಂದು ಬೆಳಿಗ್ಗೆ ಐದು ಗಂಟೆಗೇ ಎದ್ದು ಪರಿಶುದ್ಧವಾಗಿ ಸ್ನಾನಮಾಡಿ ನಿಷ್ಕಲ್ಮಶ ಹೃದಯದಿಂದ ಗಾಂಧಿ ಫೋಟೋಗೆ ಹಾರ ಹಾಕಿ ಮನೆ ಮೇಲೆ ಬಾವುಟ ಏರಿಸಿ (ಖಂಡಿತ ಮಾಡಿದೆ–ಸ್ವಾಮಿ) ಸ್ವತಂತ್ರ ಭಾರತದ ಸತ್ಪ್ರಜೆಯಾದ ನಾನು ಆಚೆಗೆ ಹೊರಟೆ–ಎಲ್ಲಾದರು ಒಂದು ಕಡೆ ಸ್ವಾತಂತ್ರ್ಯೋತ್ಸವದಲ್ಲಿ ಭಾಗ ವಹಿಸೋಣ ಅಂತ–ದೇಶದ ಕಲ್ಯಾಣಕ್ಕೆ ಈ ವರ್ಷವೂ ದುಡಿಯುವ ಪ್ರತಿಜ್ಞೆಯನ್ನು ಕೈಗೊಳ್ಳಬೇಕು ಅಂತ—

ನಗರದ ಮುಖ್ಯ ಬೀದಿಯಲ್ಲಿ ಉದ್ದಕ್ಕೂ ಹೊರಟೆ, ಸ್ವಾತಂತ್ರ್ಯೋತ್ಸವದ ವಿಶೇಷ ವೈಭವಗಳನ್ನು ಅವಲೋಕಿಸುತ್ತ. ಅಲ್ಲಲ್ಲಿ ರಾಷ್ಟ್ರಧ್ವಜಗಳು–ಹರಿದವು–ಬಣ್ಣ ಹೋದವು ಹಾರಾಡುತ್ತಿದ್ದುದು ಕಾಣುತ್ತಿತ್ತು. ದೇವೇಂದ್ರ ಭವನದ ಮುಂದೆ ಮಾವಿನ ಸೊಪ್ಪು ಬಣ್ಣದ ತೋರಣ. ಭಾರತಮಾತೆಯ ಪಠಕ್ಕೆ ಅಲಂಕಾರ ಕಳೆಕಳೆ ಯಾಗಿತ್ತು. ಹಾಗೆಯೇ ಸಿನಿಮಾಗಳ ಮುಂದೆಯೂ ಭರ್ಜರಿ ಅಲಂಕಾರ. ಸ್ವಾತಂತ್ರ್ಯೋತ್ಸವಕ್ಕೆ ಹೊಸ ಹೊಸ ಚಿತ್ರ ತರಿಸಿ ವಿಶೇಷ ಪ್ರದರ್ಶನಗಳ ಏರ್ಪಾಟು ಮಾಡಿದ್ದರು. ಸೂರ್ಯದೇವ–ವಾಷಿಂಗ್ ಲಾಂಡ್ರಿಯವನು "ಸ್ವಾತಂತ್ರ್ಯೋತ್ಸವದ ನಿಮಿತ್ತ ಗಾಂಧಿ ಟೋಪಿಗಳನ್ನು ಮಾತ್ರ ಪುಕ್ಕಟೆ ಇಸ್ತ್ರಿಮಾಡಿಕೊಡಲಾಗುತ್ತೆ" ಎಂದು ಜಾಹಿರಾತು ಮಾಡಿದ್ದನು. ಪುಸ್ತಕದಂಗಡಿ ತುಂಬ ಪತ್ರಿಕೆಗಳು. ವಿಶೇಷ ಜಾಹಿರಾತುಗಳ ಸಂಗ್ರಹಣದಿಂದಾದ ವಿಶೇಷ ಸಂಚಿಕೆಗಳು ಇಟ್ಟಾಡುತ್ತಿತ್ತು. ಆದರೂ ಜನಗಳು ಅವುಗಳನ್ನು ಕೊಂಡುಕೊಳ್ಳುತ್ತಿದ್ದುದು ಕಾಣಿಸುತ್ತಿರಲಿಲ್ಲ!

ಗಾಂಧಿಚೌಕದ ಹತ್ತಿರ ಸುಮಾರು ಜನ ಸೇರಿದ್ದರು. ಮಧ್ಯದಲ್ಲಿ ಒಂದು ಧ್ವಜ ಸ್ಥಂಭ ನೆಟ್ಟು ರಾಷ್ಟ್ರಧ್ವಜಾನ ಹಾರಿಸಿದ್ದರು. ಅಲ್ಲದರ ಅಡಿಯಲ್ಲಿ ಶುಭ್ರವಾದ ಖಾದಿ ಉಡುಪು ಮುಖ್ಯವಾಗಿ ಟೋಪಿಯನ್ನು ಧರಿಸಿದ ಇಬ್ಬರು ದೇಶಭಕ್ತರು ನಿಂತಿದ್ದರು. ಸ್ವಾತಂತ್ರ್ಯೋತ್ಸವದಲ್ಲಿ ಭಾಗವಹಿಸೋದಕ್ಕೆ ಎಲ್ಲಾದರೆ ಏನಂತೆ ಎಂದು ಅಲ್ಲಿಯೇ ಧ್ವಜವಂದನೆಮಾಡಿ ಭಾಷಣ ಕೇಳಿ ಹಿಂತಿರುಗುವುದು ಎಂದು ನಿರ್ಧರಿಸಿದೆ. ಅಲ್ಲಿಯೇ ನಿಂತೆ. ಒಂದು ನಿಮಿಷದಲ್ಲಿಯೇ ಭಾಷಣ ಪ್ರಾರಂಭ ವಾಯಿತು—

"ದೇಶಬಾಂಧವರೆ; ದೇಶ ಪ್ರೇಮಿಗಳೆ, ಆಗಸ್ಟ್ ಹದಿನೈದು, ಆಗಸ್ಟ್ 15, 15. ಎಷ್ಟು ಸಲ ಈ ಪವಿತ್ರದಿನದ ನಾಮಸ್ಮರಣೆಮಾಡಿದರೆ ತಾನೆ ನಮ್ಮ ಹೊಟ್ಟೆ ತುಂಬೀತು—ಓ ಭಾರತಾಂಬೆ, ಭಾರತಿ, ಅಗೋ ಅಲ್ಲಿ....ಅಲ್ಲಿ . ತನ್ನ ಕಂದಮ್ಮಗಳು ಆಟವಾಡುತ್ತಿರುವುದನ್ನು ನೋಡುತ್ತ ಹಸನ್ಮುಖಿಯಾಗಿ ನಿಂತಿರುವಳು ಅಲ್ಲಿ....ಇಳಿದು ಬಾ ತಾಯಿ! ಇಳಿದು ಬಾ ತಾಯಿ! ನಿನ್ನ ಬಂಧ ವಿಮೋಚನೆಮಾಡಿದ ಈ ವೀರ ಪುತ್ರರನ್ನು ಹರಸಮ್ಮ—ಆಶೀರ್ವಾದ ಮಾಡಮ್ಮ. ಮಹನೀಯರೆ, ನಾವು ಇಲ್ಲಿ ಈ ಹೊತ್ತು ಸೋನೆಮಳೆ ಬೀಳುತ್ತಿದ್ದರೂ ಸ್ವಲ್ಪವೂ ಅಳುಕದೆ, ಹಿಂಜರಿಯದೆ ಸೇರಿರುವ ಉದ್ದೇಶವನ್ನಾದರೂ ತಾವು ಸ್ವಲ್ಪ ಆಲೋಚನೆ ಮಾಡೋಣವಾಗಲಿ. ನಮಗೆ ಇಂತಹ ಅದ್ಭುತ ಶಕ್ತಿಯನ್ನು ನೀಡಿದ್ದು ಯಾವುದು? ನಮಗೆ ಇಷ್ಟೊಂದು ಸಹನೆ, ಧೈರ್ಯಗಳನ್ನು ಕಲಿಸಿದ್ದು ಯಾವುದು? ಜಾತಿ ಮತ; ಗಂಡು ಹೆಣ್ಣು, ಬಡವ ಬಲ್ಲದ, ಅಕ್ಷರಸ್ಥ, ಅನಕ್ಷರಸ್ಥ; ಓದಿದವ, ಓದದೆ ಇರುವವ; ಬುದ್ಧಿ ಇರುವವ, ಬುದ್ಧಿ ಇಲ್ಲದವ ಎನ್ನುವ ತಾರತಮ್ಯಗಳು ಸ್ವಲ್ಪವೂ ಇಲ್ಲದಂತೆ ಸಮಸ್ತ ಪ್ರಜಾವರ್ಗವನ್ನೂ ಒಂದೆಡೆಕೂಡಿಸಿದ ಅಯಸ್ಕಾಂತವಾವುದು? ಇಗೋ ಕತ್ತೆತ್ತಿನೋಡಿ....ಗಗನಗಾಮಿಯಾಗಿ ಹಾರಾಡುತ್ತಿರುವ ರಾಷ್ಟ್ರಧ್ವಜವನ್ನು, ಮಹಾತ್ಮ ಗಾಂಧಿಗೆ ಅತ್ಯಂತ ಪ್ರಿಯವಾಗಿದ್ದ ತ್ರಿವರ್ಣ ಧ್ವಜವನ್ನು, ವಿಶ್ವಶಾಂತಿಯನ್ನು ಸ್ಥಾಪಿಸಲು ಸಂಕಲ್ಪಮಾಡಿರುವ ವಿಜಯಪತಾಕೆಯನ್ನು, ಸತ್ಯ ಅಹಿಂಸೆಗಳನ್ನು ಇದೇ ವಿಶ್ವಕ್ಕೆ ಸಾರುತ್ತಿರುವ ಬಾವುಟವನ್ನು... ಇದೇ ನಮ್ಮ ಉಸಿರು—ನಮ್ಮ ಜೀವಾಳ; ಕೇಸರಿಯೇ ನಮ್ಮ ಬಣ್ಣ, ಅಶೋಕಸ್ತಂಭವೇ ನಮ್ಮ ಊರು ಗೋಲು, ಚಕ್ರವೆ ನಮ್ಮ ಜೀವನ. ಬಂಧುಭಗಿನಿಯರೆ, ನಮ್ಮ ನಲ್ಮೆಯ ರಾಷ್ಟ್ರಧ್ವಜದ ಮಹತ್ವವನ್ನು ಮಾತುಗಳಿಂದ ಬಣ್ಣಿಸಲು ಖಂಡಿತ ಸಾಧ್ಯವಿಲ್ಲ ಸಹಸ್ರಾರು ಮಂದಿ ದೇಶಪ್ರೇಮಿಗಳ ನಿಸ್ವಾರ್ಥ ತ್ಯಾಗದ ಫಲವಾಗಿ ಬಂದಿರುವ ಈ ಪವಿತ್ರ ರಾಷ್ಟ್ರಧ್ವಜಕ್ಕೆ ಲೇಶಮಾತ್ರ ಅವಮಾನವಾದರೂ ನಾವು ಸಹಿಸಲಾರೆವು. ನಮ್ಮ ದೇಶದ ಸಂಸ್ಕೃತಿಯ ನಿಶಾನಿಯಂತಿರುವ ನಮ್ಮ ಧ್ವಜಕ್ಕೆ ಮತ್ತೊಮ್ಮೆ ವಂದಿಸೋಣ. ಇಂತಹ ಪವಿತ್ರ ಧ್ವಜ ನಮ್ಮ ಮನಸ್ಸಿನಲ್ಲಿ ಎಂದೆಂದಿಗೂ ಹಾರಾಡುತ್ತಿರಲಿ! ನಮ್ಮ ಹೃದಯದಲ್ಲಿ ಯಾವಾಗಲೂ ನೆಲಸಿರಲಿ-·- ಇಂಥಹ ಪ್ರಿಯವಾದ ಬಾವುಟದ ಗುರುತಿರುವ ನಮ್ಮ ಎಲಿಫೆಂಟ್ ಕಂಪನಿಯವರು ತಯಾರಿಸಿದ "ವನಸ್ಪತಿ ತುಪ್ಪ"ವನ್ನೇ ಯಾವಾಗಲೂ ನಿಮ್ಮ ಅಡಿಗೆಗೆ ಉಪಯೋಗಿಸಿ....

—ಹಾ. ರಾ.

ಮನೆಯಲ್ಲಿ ಮಹಾಭಾರತ

ಸಾಯಂಕಾಲದ ಹೊತ್ತು ಹೆಂಡತಿ ಮತ್ತು ತಾಯಿ ಗುಡಿಗೆ ಪುರಾಣ ಕೇಳೋಕೆ ಹೋಗಿದ್ದರು. ಆದ್ದರಿಂದ ಮನೆಯ ವಾತಾವರಣ ಕೊಂಚ ಶಾಂತವಾಗಿತ್ತು. ಅಕೌಂಟೆಂಟ್ ಗೋವಿಂದಯ್ಯ ಕೊಟಡಿಯಲ್ಲಿ ಒಬ್ಬರೇ ಕುಳಿತು ಕ್ರಾಸ್‌ವರ್ಡ್ ಧ್ಯಾನದಲ್ಲಿ ಮಗ್ನರಾಗಿರಲು ಅನುಕೂಲವಾಗಿತ್ತು. ಆಗಾಗ ನಿಘಂಟಿನ ಪುಟಗಳನ್ನು ಬಿರಬಿರನೆ ತಿರುವುತ್ತ, ಸೀಸದ ಕಡ್ಡಿಯಿಂದ ಒಮ್ಮೊಮ್ಮೆ ಏನೋ ಗೀಚುತ್ತಾ, ಒಮ್ಮೆ ಅದರಿಂದ ಕೂದಲು ಕೆರೆದು, ಒಮ್ಮೆ ಅದನ್ನು ಮೃದುವಾಗಿ ಕಡಿದು, ಗೋವಿಂದಯ್ಯ ಸ್ವಲ್ಪ ಹೊತ್ತು ಧ್ಯಾನದಲ್ಲಿಯೂ ನಡು ನಡುವೆ ಕನಸಿನಲ್ಲಿಯೂ ಕಾಲಕ್ಷೇಪ ಮಾಡು ತ್ತಿರುವಾಗ ಹೊರಗೆ ಹೆಂಗಸರು ಸದ್ದುಮಾಡುತ್ತಾ ಬಂದರು.

"ಪುಣ್ಯ ತಾಯಿ ಕಣೆ ಆ ದ್ರೌಪದಿ ಲಕ್ಷಣವಂತೆ. ಈಗ ಅಂಥಾ ಹೆಣ್ಣು ಮಕ್ಕಳನ್ನು ಎಲ್ಲಿ ಕಾಣಬೇಕು!"—ಎಂದು ಅತ್ತೆ ಮನೆಯೊಳಗೆ ಕಾಲಿಡುತ್ತಾ ಹೇಳಿದರು.

ನಲ್ಲಿ ಕಟ್ಟೆಯಲ್ಲಿ ಕೈಕಾಲು ತೊಳೆದುಕೊಳ್ಳುತ್ತಿದ್ದ ಸೊಸೆ ಸುಮ್ಮನಿರಲಿಲ್ಲ— "ಮುಖ್ಯ ಕುಂತೀದೇವೀನೆ ನನಗನ್ನಿಸೋದು ಎಂಥಾ ಭಾಗ್ಯವಂತೆ! ಆದ್ದರಿಂದಲೇ ಅಂಥಾ ಮಕ್ಕಳನ್ನ ಪಡೆದಳು. ಅವರನ್ನ ಹೆಂಡತಿ ಜೊತೆಗೇನೇ ಸುಖವಾಗಿರೋದಕ್ಕೆ ಬಿಟ್ಟು ದೂರದಲ್ಲೇ ಇದ್ದು ಆನಂದ ಪಟ್ಟಳು"—ಅರಳು ಹೊಟ್ಟಿದಹಾಗೆ ಮಾತು ಬಂತು.

"ಹೂಂ, ಹೂಂ, ಸಾಕು, ನಿನ್ನ ಪುರಾಣ ನಿನ್ನ ಭಾರತದ ಜ್ಞಾನಕ್ಕೆ ಏನು ಕಡಮೆ! ಸದ್ಯ ಅಡಿಗೆಯಾಗಬೇಕು"—ಎಂದು ಬುಸುಗುಟ್ಟುತ್ತಾ ಅತ್ತೆ—ಅಡುಗೆ ಮನೆಯ ಯಜಮಾನಿ—ಧಡಧಡನೆ ನಡೆದು ಹುತ್ತವನ್ನು ಹೊಕ್ಕರು.

ಅನ್ನಕ್ಕೆ ಎಸರಿಡಬೇಕೆಂದು ಪಾತ್ರೆಯನ್ನು ಕೈಗೆತ್ತಿಕೊಂಡಾಗ ಅದರ ಅಂಚಿ ನಲ್ಲಿ ಏನೋ ಕಾಣಿಸಿತು. ದೃಷ್ಟಿ ಕೊಂಚ ಮಂದ, ಪರೀಕ್ಷಿಸಿ ನೋಡಿದರು. ಮುಚ್ಚಿ ನೋಡಿದರು. ಮರುಕ್ಷಣದಲ್ಲಿಯೇ ಪಾತ್ರೆಯನ್ನು ನೆಲಕ್ಕೆ ಕುಕ್ಕಿದರು.

'ಢಂ' ಅಂತ ಸದ್ದು! ಭಾರತದ ಯುದ್ಧ ಪ್ರಾರಂಭವಾಗೋ ಮೊದಲು ಅತಿ ರಥ ಮಹಾರಥರೆಲ್ಲ ಶಂಖವಾಧ್ಯ ನಡೆಸಿದರಂತಲ್ಲ! ಹಾಗೇನೆ ಮನೆಯ ಮಹಾಭಾರತ ಪ್ರಾರಂಭವಾಗುವ ಮೊದಲು ಇಂತಹ ಸದ್ದಾಗುವುದು ಗೋವಿಂದಯ್ಯನವರ ಅನು ಭವಕ್ಕೆ ಬಂದ ವಿಷಯ. ಅವರು ಕ್ರಾಸ್‌ವರ್ಡ್ ಕೋಟೆಯಿಂದ ಹೊರಬಂದು, ಸೀಸದ ಕಡ್ಡಿ ಕಡಿಯುತ್ತಾ ಏನಿರಬಹುದೆಂದು ಯೋಚಿಸಿದರು.

"ಏನತ್ತೇ ಅದು, ಎಷ್ಟು ದಿನ ಬಾಳ್ತಾವೆ ಹೀಗೆಮಾಡಿದರೆ ಪಾತ್ರೆಗಳು" ಅನ್ನುತ್ತಾ ಸೊಸೆ ಅಡುಗೆ ಮನೆಗೆ ಧಾವಿಸಿದಳು.

ಅತ್ತೆ ಪಾತ್ರೆಯನ್ನು ತಂದು ಸೊಸೆಯ ಮುಸುಡಿಗೆ ಹಿಡಿಯುತ್ತಾ "ಏನನ್ಯಾಯಾನೇ ಇದು, ನೋಡೇ ಇಲ್ಲಿ"—ಎಂದು ಒದರಿದರು.

"ಏನಾಗಿದೆ...."

"ಆಗೋದೇನು! ಕಣ್ಣು ಬಿಟ್ಟು ನೋಡೆ. ಮುಸುರೆ ಹಾಗೇನೇ ಇದೆ. ನರಕ....ನರಕ....ನರಕ!"

"ಏನ್ಮಾಡೋದು .. ನಿಮ್ಮಗಾ ತರೋ ಅಕ್ಕಿ ಅಂಥಾದ್ದು ಅದರಲ್ಲಿಯೂ ನೀವು ಮೆಡ್ಡೆಯಾಗಿ ಬೇಯಿಸಿಬಿಡ್ತೀರಿ ಪಾತ್ರೆಗೆ ಅಂಟ್ಕೊಂಡಿರುತ್ತೆ. ಎಷ್ಟು ತೊಳೆದರೂ ಹೋಗುಲ್ಲ. ಏನೋ ಒಂದು ಚೂರು ಉಳ್ಕೊಂಬಿಡ್ತು. ಅದಕ್ಕೆ ಇಷ್ಟೆಲ್ಲ ಕಿರಿಚ್ಕೋಬೇಕೆ? ತೊಳೆದು ತಾ ಅಂದ್ರೆ ತರೋಲ್ವೆ?"

"ಹೆಚ್ಕೊಂಬಿಟ್ಟೆ ಕಣೆ ನೀನು, ಬಲು ಹೆಚ್ಕೊಂಬಿಟ್ಟೆ!"

"ಯಾಕೆ ಹಾಗಂತೀರಾ ಮತ್ತೆ ಮತ್ತೆ. ಇಂಥ ತಪ್ಪನ್ನ ನೀವು ಈಗ ತಾನೆ ಹೊಗಳ್ತಿದ್ರಲ್ಲ—ಆ ದ್ರೌಪದೀನೇ ಮಾಡ್ಲಿಲ್ವೆ? ಆಕೆ ತೊಳೆದಿಟ್ಟಿದ್ದ ಅಕ್ಷಯ ಪಾತ್ರೆ ಅಂಚಿನಲ್ಲಿ ಅನ್ನದಗುಳು ಉಳಿದ್ಹೋಗಿರಲಿಲ್ವೆ? ಅದರಿಂದಾನೆ ದೂರ್ವಾಸರ ಕೈನಿಂದ ಪಾಂಡವರು ಬದಕ್ಕೊಳ್ಳಿಲ್ವೆ?

"ಸರಿ ಸರಿ. ಬಲು ಜಾಣೆ! ಸಾಕ್ಷಿಗೆ ನಿನಗೆ ದ್ರೌಪದಿ! ಅಕ್ಷಯಪಾತ್ರೆ! ಸಾಕು ನಿನ್ನ ಜ್ಞಾನ. ತಿನ್ಸು ಈ ಎಂಜಲನ್ನ ನಿನ್ನ ಗಂಡನಿಗೆ! ಆ ಕೃಷ್ಣಂಗೆ; ಅಕ್ಷಯ ಪಾತ್ರೇಲಿರೋ ಅಗಳು ತಿಂದಕೂಡ್ಲೆ ತೃಪ್ತಿಯಾದಹಾಗೇನೇ ಇವನಿಗೆ ಈ ಮುಸುರೆ ಚೂರು ತಿಂದರೆ ಹೊಟ್ಟೆ ತುಂಬುತ್ತೋ ನೋಡೋಣ. ಯಾಕೋ ರೋಸಿ ಹೋಯ್ತು ಕಣೆ ನನಗೆ, ನಿನ್ನ ಮಡಿ ಮುಸುರೆ ಇಲ್ಲದ ಪಾಷಂಡ್ತನ ನೋಡಿ"

ಮಾತಿಗೆ ಮಾತು ಬೆಳೆಯಿತು. ಜಗಳ ಬಲಕಾಯಿಸಿತು. ಭಾರತ ಮುಂದುವರಿಯಿತು.

"Flight ಆಗಬಹುದೇ Blight ಏ ಸರಿಯೆ? War ಒಳ್ಳೆಯದೇ Far ಏ ಉತ್ತಮವೆ? ಎಂದೆಲ್ಲ ಮನಸ್ಸಿನ ತಕ್ಕಡಿಯಲ್ಲಿ ತೂಗಿ ನೋಡುತ್ತಿದ್ದ ಗೋವಿಂದಯ್ಯ Blight ಸುಖವಿಲ್ಲ Flight ಏ ಸರಿ, War ಗಿಂತ Far ಏ ಲೇಸು ಎಂದು ಬೇಗನೆ ನಿರ್ಧಾರಕ್ಕೆ ಬಂದು, ಗೂಟದಿಂದ ಟೋಪಿಯನ್ನು ತೆಗೆದು ಬಟ್ಟತಲೆ ಮುಚ್ಚಿಕೊಂಡು, ಇನ್ನೊಬ್ಬ ಕ್ರಾಸ್‌ವರ್ಡ್ ಗೆಳೆಯರನ್ನು ನೋಡೋಣವೆಂದುಕೊಳ್ಳುತ್ತಾ ಕುರುಕ್ಷೇತ್ರದಿಂದ ಹೊರತೆರಳಿದಂಥವರಾದರು—ಎಂಬಲ್ಲಿಗೆ ಮನೆಯಲ್ಲಿ ಮಹಾಭಾರತದ ಒಂದಧ್ಯಾಯ ಮುಗಿಯಿತು.

—ರಾಮಕೃಷ್ಣ.

ಒಂಟಿ ಚಪ್ಪಲಿ

ಮಠದಿಂದ ಹೊರಕ್ಕೆ ಬಂದೆ....ಒಂಟಿ ಚಪ್ಪಲಿ ಇದೆ, ಬಲಗಾಲಿನದು. ಎಡ ಗಾಲಿನದು ಪತ್ತೆಯೆ ಇಲ್ಲ.

ನಾಯಿಯ ಹಾಗೆ ಮೂಲೆ ಮೂಲೆಯನ್ನೂ ಮೂಸಿನೋಡಿದೆ. ಸಿಗಲಿಲ್ಲ. ಬಲಗಾಲಿಕೆ ಅದನ್ನ ತಗುಲಿಸಿ, ಎಡಗಾಲನ್ನು ಖಾಲಿ ತುಳಿಯುತ್ತ, ಕಂಬದ ಮರೆ ಯಲ್ಲಿ, ಮೆಟ್ಟಲಕೆಳಗೆ, ಹೂಗಿಡಗಳ ಬುಡದಲ್ಲಿ, ಗೇಟಿನ ಹತ್ತಿರ,—ಎಲ್ಲ ಹುಡುಕಿದೆ.

ಆದರೆ, ಯಾರನ್ನು ಶಪಿಸುವುದು? ಒಂದೇ ಒಂದು ಚಪ್ಪಲಿಯನ್ನು ಯಾರು ಕದ್ದಿರುತ್ತಾರೆ? ಒಂಟಿಕಾಲಿನ ಕುಂಟ ಯಾವನಾದರೂ ಬಂದಿದ್ದನೆ? ಅಥವಾ, ಮಠ ದಲ್ಲಿ ಭಜನೆ ಮಾಡುತ್ತಾ ಮಾಡುತ್ತಾ ಯಾವನಿಗಾದರೂ, ಪಾದ ಹುಟ್ಟಿಕೊಂಡಿತೆ? ....ಇರಲಾರದು.

ಹಾಗಾದರೆ, ನಾನೇ ಮನೆಯಿಂದ ಬಂದಾಗ, ಒಂದೇ ಕಾಲಿಗೆ ಚಪ್ಪಲಿ ತಗುಲಿ ಸಿದ್ದೆನೆ! ಎಡಗಾಲಿಗೇಕೆ ಚಪ್ಪಲಿ, ಎಂದು ಅದನ್ನ ಹಾಗೆಯೇ ಊರುತ್ತ ಬಂದಿದ್ದೆನೆ? ಎಡ ಅಂಗಾಲನ್ನು ಬೆಳಕಿನಲ್ಲಿ ಪರೀಕ್ಷಿಸಿದೆ ಇಲ್ಲ. ಚಪ್ಪಲಿ ಇಲ್ಲದೆ ಬಂದಿದ್ದರೆ, ಕೆಳಗೆ ಕೆಸರಿರಬೇಕಲ್ಲವೆ? ಎರಡು ಅಂಗಾಲುಗಳೂ ಶುಭ್ರವಾಗಿಯೇ ಇದ್ದುವು. ಆದ್ದರಿಂದ, ತಪ್ಪು ನನ್ನದಲ್ಲ, ಎಂಬುದು ನಿರ್ಧರವಾಯಿತು.

ಯಾವನೋ ಘಾತುಕ, ಕದಿಯುವ ಆಸೆಯಿಂದಲ್ಲ ಕಿರುಕುಳದ ದುರುದ್ದೇಶದಿಂದ ಮಾತ್ರ, ನನ್ನ ಮೇಲಿನ ದ್ವೇಷದಿಂದ, ನನಗೆ ಕಾಟ ಕೊಡುವ ಪಿತೂರಿಗಾಗಿ, ನನ್ನ ಒಂದು ಚಪ್ಪಲಿಯನ್ನು, ತನ್ನ ಕಿಸೆಯೊಳಗೆ ತುಂಬಿಕೊಂಡು ಪರಾರಿಯಾಗಿರಬೇಕು.

ಅಥವಾ, ಮೊನ್ನೆ ಸುದ್ದಿ ಬಂದಿದ್ದ ಹಾಗೆ, ಪಳಗಿದ ನಾಯಿಗಳನ್ನು ಪಯೋ ಗಿಸಿ, ಹೊಸ ಚಪ್ಪಲಿಗಳನ್ನು ಕದಿಯುವ ಗ್ಯಾಂಗ್ ಒಂದು ಈ ಊರಿಗೆ ಬಂದಿ ದೆಯೋ, ಏನೊ? ಇರಲಿ! ಅವರ ನಾಯಿ ಮತ್ತೊಂದು ಚಪ್ಪಲಿಗಾಗಿ ಈ ತನಕ ಬರುವುದರೊಳಗೆ, ನಾನಿದನ್ನು....

ಇದನ್ನು ಏನು ಮಾಡಲಿ? ಇಲ್ಲೇ ಮರೆಯಲ್ಲಿ ಬಿಸಾಕಲೆ? ಅವರ ನಾಯಿ ಅದನ್ನು ಪತ್ತೆ ಹಚ್ಚೇ ಹಚ್ಚುತ್ತದೆ. ಈ ಕಂಬದ ಮೇಲಿರಿಸಲೆ? ಯಾರಾದರೂ ಭಕ್ತರು ಕಂಬಕ್ಕೊರಗಿದರೆ, ಇದು ಅವರ ತಲೆಯ ಮೇಲೆ ಬಿದ್ದರೆ, ಆ ಪಾಪ ನನಗೆ


ಹಾಕುವುದಿಲ್ಲವೆ? ಇನ್ನೂ ಜನರು ರಸ್ತೆಯ ಮೇಲೆ, ಓಡಾಡುತ್ತಲೇ ಇದಾರೆ. ಬಲಗಾಲಿಂದ ಇದನ್ನ ಕಳಚಿ ಎಸೆದರೆ, ಅವರು ನನ್ನನ್ನ ಏನೆಂದು ತಿಳಿದುಕೊಂಡಾರು? ಪರಿಚಿತರಾರಾದರೂ ಕಂಡರೆ, ಅವರಿಗೆ ಗಾಬರಿಯಾಗುವುದಿಲ್ಲವೆ?

ಅಮಾವಾಸ್ಯೆ ಬೇರೆ ಅವತ್ತು. ಅವರ ಅನುಮಾನಕ್ಕೆ ಅದೂ ಪೋಷಕ. ಎಸೆದಾಗ, ಕತ್ತಲಲ್ಲಿ ಯಾರಮೇಲಾದರೂ ಬಿದ್ದರೆ? ಇನ್ನು ಕೋರ್ಟು ಕಚೇರಿಗಳು ಬೇರೆ?

ಕೂಡದು, ಎಸೆಯಕೂಡದು. ಮನೆಗೇ ಸಾಗಿಸಬೇಕು. ನಂತರ, ಅಂಗಡಿಯವನ ಹತ್ತಿರ ಹೋಗಿ, ಎಡಗಾಲಿನದನ್ನು ಮಾತ್ರ, ಒಂಟಿ, ಒಂದನ್ನು, ಆರ್ಡರ್ ಕೊಟ್ಟು, ಮಾಡಿಸಿಕೊಳ್ಳಬೇಕು. ಆದರೆ, ಅವನು ಅದಕ್ಕೆ ಹೆಚ್ಚು ಬೆಲೆ ಕೇಳಬಹುದು, ಜೊತೆಗೆ ೬ ರೂಪಾಯಿ, ಒಂಟಿಗೆ ೪ ರೂಪಾಯಿ, ಅಂತ ಆತ ಕೇಳಿದರೆ?

ಬೇಡ! ಬೇಡ! ಇಲ್ಲೇ ಇನ್ನೂ ನಾಲ್ಕಾರು ಜೊತೆಗಳು, ಒಳಗಿರುವವರದು ಬಿದ್ದಿವೆಯಲ್ಲಾ! ಓ! ಇದು ನನ್ನ ಅಳತೆಗೇ ಮಾಡಿದ ಹಾಗಿದೆ. ಎಡಗಾಲಿಗೆ ಇದನ್ನು ತಗುಲಿಸಿ, ಬಲಗಾಲಿಗೆ ನನ್ನದನ್ನೇ ಹಾಕಿಕೊಂಡು, ಹೊರಟೇಬಿಡುತ್ತೇನೆ. ಆತನೇ ಪೇಚಾಡಲಿ.

—ಶಾಟಾಳಿ.



ಇವತ್ತು ನಂಗೇನು ಹೇಳಿಕೊಟ್ಟರು ಗೊತ್ತೆ? ಗಾರೆ ಅರೆಯೋದು ಕಣೇ!
—ನಂಗೇನು ಹೇಳಿಕೊಟ್ಟರೂ ಅಂತಾ – ಅಂಗಳ ಸಾರಿಸೋದು ಕಣೋ!

ಆಚೆ ದಡ

"ನಮ್ಮೂರಲ್ಲಿ ಇಂತ ತಾಪತ್ರಯವಿಲ್ಲಪ್ಪ! ಯಾವತ್ತೂ ನಾನು ಇಂಥ ಪ್ರವಾಹಕ್ಕೆ ಸಿಕ್ಕಿಲ್ಲ" ಎಂದೆ, ಅವನ ಕೈ ಹಿಡಿದುಕೊಂಡೇ. ನಾವು ಬೊಂಬಾಯಲ್ಲಿನ ಒಂದು ಚೌಕದಲ್ಲಿದ್ದೆವು.

"ಛೆ! ಇದೆಂಥ ಪ್ರವಾಹ! ಇಲ್ಲಿರುವವರಿಗೆ ಇದೇನು ಅಂಥ ಭಯಂಕರವೇನಲ್ಲ. ಮೊದಲು ಎರಡು ಮೂರು ಬಾರಿ ಕೊಂಚ ದಿಗಿಲು ಅಷ್ಟೆ....ಆಮೇಲೆ ರೂಢಿಬಿದ್ದು ಹೋಗುತ್ತೆ," ಎಂದ, ಆತ.

ರಸ್ತೆ ಆಚೆ ದಡ ಸೇರಬೇಕಾಗಿತ್ತು, ನಾವು. ಸಾಮಾನ್ಯವಾಗಿ, ರಸ್ತೆ ದಾಟಲು ನಾನು ಒಂದು ಟ್ಯಾಕ್ಸಿ ಗೊತ್ತುಮಾಡಿಬಿಡುವೆ; ಏಕೆಂದರೆ, ನನಗಿರುವುದು ಇದೊಂದೇ ಪ್ರಾಣ. ಆದರೆ, ಅವತ್ತು, ಟ್ಯಾಕ್ಸಿ ಡ್ರೈವರುಗಳೆಲ್ಲ ಮುಷ್ಕರ ಹೂಡಿ, ನನ್ನನ್ನು ಪೇಚಿಗೆ ತಂದರು.

ನಾವೀಕಡೆ; ಆಕಡೆ, ಸೊಗಸಾದ ಕಾಫಿ ಮಾಡುವ ಒಂದು ಹೋಟೆಲು ನಡುವೆ, ನಿಮಿಷಕ್ಕೊಂದು ಮೈಲಿಯಂತೆ ಅವಿಚ್ಛಿನ್ನವಾಗಿ ಓಡುವ ವಾಹನವಾಹಿನಿ.

"ನೋಡಿ! ನನ್ನ ಜೊತೆ ಬನ್ನಿ! ಇಳಿದೇಬಿಡೋಣ. ನಾವು ಅಡ್ಡ ಹೋದರೇನೇ ಅವರು ನಿಲ್ಲಿಸುವುದು" ಎಂದ, ಆತ.

"ಅಯ್ಯೋ! ಬೇಡಪ್ಪ! ನಾನೊಲ್ಲೆ...." ಎಂದೆ, ಆತನ ಕೈ ಹಿಡಿದೆಳೆಯುತ್ತ.

"ಹಾಗಲ್ಲ! ಅಡ್ಡ ಸಿಕ್ಕರೆ, ನಮ್ಮನ್ನ ಕೊಲ್ಲುವ ಮನಸ್ಸು ಒಬ್ಬರಿಗೂ ಬರುವುದಿಲ್ಲ"

"ಯಾರಾದರೂ ಸಿಕ್ಕರೆ ಕೊಂದೇಬಿಡೋಣ ಅಂತಲೇ ಅವರು ಹಾಗೆ ನುಗ್ಗುತ್ತಿರುವುದು"

"ನೋಡಿ, ಆ ಹೋಟಲು! ಇಲ್ಲಿಂದಲೇ ಕಾಣಿಸುತ್ತಾ ಇದೆ, ಬೋರ್ಡು. ತಿಂಗಳಿಂದ ನಿಮ್ಮ ನಾಲಿಗೆ ಕಾಣದ ಕಾಫಿ ರುಚಿ, ಅಗೋ ಅಲ್ಲಿ, ಆ ಹೋಟಲಲ್ಲಿ ನಿಮಗಾಗಿ ಕಾದುಕೂತಿದೆ"

"ಬೇಡಪ್ಪಾ......."

"ಬನ್ನಿ! ಬನ್ನಿ! ಓಡಿ...." ಎನ್ನುತ್ತ, ಆತ ನನ್ನನ್ನಿಳಿಸೇಬಿಟ್ಟ, ರಸ್ತೆಗೆ. ಎಳೆದೇ ಬಿಟ್ಟ, ಉದ್ದಕ್ಕೂ. ಕಿವಿಎಲ್ಲ ಹಾರನ್, ಮೂಗೆಲ್ಲಾ ಪೆಟ್ರೋಲ್,

ಕಣ್ಣುತುಂಬ ಚಕ್ರಗಳ ಸುಳಿಗಳು ! ನಮ್ಮ ಬಲಕ್ಕೂ ಎಡಕ್ಕೂ ಬ್ರೇಕುಗಳು ಕಿರಿಚಿದುವು; ಡ್ರೈವರುಗಳು ಶಪಿಸಿದರು.

"ನಿಲ್ಲಿ" ಎನ್ನುತ್ತ, ನನ್ನನ್ನು ಆತ ಹಿಂದಕ್ಕೆ ನೂಕಿ ಮುಂದಕ್ಕೆಳೆದು ತೋಳನ್ನು ತಳ್ಳಿ, ಎದೆಯ ಮೇಲೆ ಕೈ ಇಟ್ಟು, ಗದರಿಸಿದ. ನಾನು ನಿಂತೆ, ನಡು ರಸ್ತೆಯಲ್ಲಿ "ಅಲ್ಲೇ ನಿಂತಿರಿ! ಕದಲಿದರೆ, ಸತ್ತೇಹೋಗ್ತೀವೆ," ಅಂದ, ಆತ ನಡಗುತ್ತ.

ಹಿಂದಿನಿಂದ ಕಾರೊಂದು ನನ್ನ ಹಿಮ್ಮಡಿಯನ್ನೊರಸುತ್ತ ಮುಂದೆ ಹೋಯಿತು. ಮುಂದಿನಿಂದ ಕಾರೊಂದು ಆತನ ಹೆಗಲ ಮೇಲಿನ ಬ್ಯಾಗನ್ನು ಹೊತ್ತುಕೊಂಡು ಹೋಯಿತು.

ಚೆವ್ರಲೆ ಬಂದು ನನ್ನನ್ನು ಗಜ ದೂರ ಎಡಕ್ಕೆ ಹಾರಿಸಿತು. ಫೋರ್ಡೊಂದು ಆತನನ್ನು ನನ್ನನ್ನ ತಬ್ಬಿಕೊಳ್ಳುವಂತೆ ಮಾಡಿತು ಅದರ ಡ್ರೈವರ್ ನಮ್ಮಿಬ್ಬರ ಮೇಲೂ ಕಣ್ಣಿಂದ ಕೆಂಡ ಕಾರಿದ. ಎರಡು ನಿಮಿಷಗಳಾಗುತ್ತಲೂ, ಅವನು ಕಾರನ್ನು ಹಿಂತಿರುಗಿಸಿಕೊಂಡು ಬಂದು, ನಮ್ಮನ್ನು ಕೊಲ್ಲಲು ಯತ್ನಿಸಿದ.

ನಾವು ಅರ್ಧ ಮೊಳ ಆಚೆ ಸರಿದೆವು. ಆಗೊಬ್ಬ ೫೦ ಮೈಲಿ ಸ್ಪೀಡಿನಲ್ಲಿ ಅಡ್ಡ ಬಂದ. ನಾವು ಗಗನಕ್ಕೆ ನೆಗೆದೆವು, ಆತ ಬೊಂಬಾಯಿ ಭಾಷೆಯಲ್ಲೇ ಏನೋ ಬೊಗುಳಿದ. "ಏನಂದ ಅವನು?" ಎಂದೆ. ಆತ, "ಅದನ್ನ ತರ್ಜಮೆ ಮಾಡಲು ಸಾಧ್ಯವೇ ಇಲ್ಲ" ಎಂದು ಉತ್ತರಕೊಟ್ಟ.

ಆಗ, ತನ್ನ ಕೈಯಲ್ಲಿನ ಸಣ್ಣ ದೊಣ್ಣೆಯನ್ನು ತಿರುಗಿಸುತ್ತ, ಒಬ್ಬ ಪೋಲೀಸಿನವನು ನಾವು ನಿಂತಿದ್ದ ಕಡೆಗೆ ಓಡೋಡಿ ಬರುತ್ತಿದ್ದ, ಏನೇನೋ ಒದರುತ್ತ.

"ಏನು ಬೇಕಂತೆ ಅವನಿಗೆ" ಎಂದೆ.

"ನಾವಿಬ್ಬರೂ ಇಲ್ಲಿ ಮಾತನಾಡುತ್ತ ನಿಂತಿರಬಾರದಂತೆ"

"ಅವನು ಹೇಳುವುದು ನ್ಯಾಯವೆ! ಈ ಕಾರುಗಳ ಓಡಾಟವನ್ನು ಹತ್ತು ಸೆಕೆಂಡ್ ನಿಲ್ಲಿಸುವುದಕ್ಕೆ ಹೇಳು!" ಎಂದೆ.

"ಹೋಗರಿ, ಆಚೆಗೆ... ಓಡಿರಿ," ಎಂದ, ಪೋಲೀಸಿನವನು. ಖೂನಿಗಾರರ ಸಮೂಹದೊಳಕ್ಕೆ ಅವನು ನುಗ್ಗೇಬಿಟ್ಟ.

ನನ್ನ ಸ್ನೇಹಿತ ನನ್ನನ್ನು ಎಳೆದೊಯ್ದ. ನಾನು ಎರಡು ಕಣ್ಣುಗಳನ್ನೂ ಮುಚ್ಚಿಕೊಂಡೆ. ವೆಂಕಟರಮಣಾ ಎಂದು ಜಪಿಸಿದೆ. ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟೆ.

ಬ್ರೇಕುಗಳು ಕಿರಿಚಿದುವು, ಟೈರುಗಳು ಅರಚಿದುವು; ಹಾರನ್ನುಗಳು ಆರ್ಭಟಿಸಿದುವು; ಶಾಪಗಳು ಬಡಿದವು; ಬಂಪರುಗಳು ಒಂದಕ್ಕೊಂದು ಹೆಣೆದುಕೊಂಡುವು; ಕಿಟಕಿಗಳಿಂದ ಮುಷ್ಟಿಗಳು ಹೊರಬಂದು ನನ್ನ ಮೂಗನ್ನು ತಾಗಿದುವು.

ನಾವು ಆಚೆ ದಡ ಸೇರಿದೆವು.

—ರೇವಣ್ಣ.

ಕಾಬೂಲ್ದ್ರಾಕ್ಷಿ

ಎಲ್ಲಿಗೋ ಹೋಗ್ತಿದ್ದೋನು ಮಾರ್ಕೆಟ್ಟಿಗೆ ನುಗ್ಗಿದೆ. ಒಳಗೆ ಹೂವಿನೋ ಕಾರ್ಟ ತಡೀಲಾರ್ದೆ ಹಣ್ಣಿನ 'ಸ್ಟಾಲಿ'ಗೆ ಅಡಿಯಿಟ್ಟಾಗ, "ನಾನ್ಯಾಕೀಗಿಲ್ಲಿಗ್ಬಂದದ್ದೋ"ಂತ ಅಂದ್ಕೊಂಡೆ. ನಾನ್ಹೋಗ್ಬೇಕಾಗಿದ್ದದ್ದು ಆಸ್ಪತ್ರೇಗೆ – ವಿಕ್ಟೋರಿಯಾ ಆಸ್ಪತ್ರೇಗೆ. ಅಲ್ಲಿ ನನ್ಹಳೇಸ್ನೇಹಿತ, ಆಟ-ಊಟ ಎಡ್ನೂರ್ ನಂಜತೇಲೇ ಕಲ್ತ ಶಿವಸ್ವಾಮಿ (ಶಿವೂಂತ್ಕೂಗೋದು), ಎಡ್ಮೂರ್ರು ತಿಂಗ್ಳಿಂದ್ಲೂ ಒಂದ್ಹಾಸ್ಗೆ ಹಿಡಿದಿದ್ದಾನ್ಬದ್ರವಾಗೀಂತ ತಿಳಿದ್ಮೇಲೆ ಅವನ್ನೋಡ್ಕೊಂಡ್ಬರೋಣಾಂತ್ಹೊರ್ಟಿದ್ದು. ಆದ್ರೆ ದೈವ ಲೀಲೇಂತ ಕಾಣುತ್ತೆ, ನನ್ನ—ಆಸ್ಪತ್ರೇಗ್ಹೋಗ್ತಿದ್ದೋನ್ನ ಆ ದಾರಿ ತಪ್ಪಿ ನೆಟ್ಗೆ ಮಾರ್ಕೆಟ್ನೊಳಕ್ಕೆ, ಅದ್ರಲ್ಲೂ ಹಣ್ಣಂಗ್ಡೀ ಸಾಲ್ಗೇನೇ ನೂಕಿದ್ದು ...ದೊಡ್ಡೋರ್ಹೇಳ್ತಾರಲ್ಲಾ, "ಖಾಯಿಲೆಯೋರ್ನ ಅವರ್ನ ಇವರ್ನ ಬರೀಕೈಲ್ಹೋಗ್ನೋಡ್ಬಾರ್ದು, ಕಡೇಗೇನೂ ಇಲ್ಲಿದ್ರೂ ಒಂದೆರಡ್ ದೀಪ ದ್ರಾಕ್ಷೀನಾದ್ರೂ ತೊಗೊಂಡ್ಹೋಗ್ಕೊಟ್ಟು ಕ್ಷೇಮಲಾಭ ವಿಚಾರಿಸ್ಬೇಕೂಂತ—ಅದು ತಟ್ಟನೆ ಹೋಳೀತು, ಆ ಮಿರ್‌ಮಿರಗ್ತಾ ಓರಣ್ವಾಗ್ಜೋಡ್ಸಿದ್ದ ಹಣ್ಣುಗಳನ್ನೋಡ್ದೇಟ್ಗೆ.

ಬಾಲ್ಯಸ್ನೇಹಿತ ಶಿವೂನ್ನೋಡೋಕೆ ಬರೀಕೈಲ್ಹೋಗೋದಂತೂ ನಂಗೂ ಸರಿ ಬೀಳ್ಳಿಲ್ಲ. ಅಂಗ್ಡೀ ಅಂಗ್ಡೀನು ತಲಾಷ್ ಮಾಡ್ದೆ, ಅವನಿಗ್ಸರಿಯಾದ, ಅಂದ್ರೆ ಅವನ್ನಾಲ್ಗೇ ಸವೀಗೋ ಅಥ್ವಾ ಅವನ್ರೋಗಕ್ಕೊಕ್ಕಂಥಾ ಹಣ್ಯಾವ್ದೂಂತ....."ಇಲ್ಬನ್ನಿಲ್ಲಿನ್ನಿ, ಈಗ್ತಾನ್ಬಂಬಿದೆ ಸಪೋಟಾ"ಂತೊಬ್ಬ.....ಬೆಂಗಳೂರು Apple (ಸೇಬು) ಸರ್, ಇಂಥಾಮಾಲ್ಕನಸ್ನಲ್ಲೂ ನೋಡೊಲ್ಲಾ"ಂತಿನ್ನೊಬ್ಬ—ಹೀಗಲ್ಲಿದ್ದೋರೆಲ್ಲಾ ಒಬ್ರಮೇಲೊಬ್ರು ಪೈಪೋಟೀ ಮೇಲೆ ಕಂಠಶೋಷಣೆ ಮಾಡ್ಕೊಂಡ್ರು....ಆದ್ರೆ ನಾನವ್ರ ಬುಟ್ಟಿಗ್ಬಿದ್ರೇ ?....ಮುಂದ್ಹೋದೆ....ಒಂದ್ಕಡೆ ನನ್ನನ್ನೇ 'ಓಡ್ಬಾ'ಂತ್ಕರೆಯೋ ಹಾಗ್ಕೂತಿದೆ ಕಾಬೂಲ್ದ್ರಾಕ್ಷಿ ಜಗ್‌ಜಗಿಸ್ತಾ ಜೊಂಪೆ ಜೊಂಪ್ವಾಗಿ ಗೂಡೇಲಿ.... ಏಳೆಂಟು ವರ್ಷಗಳಿಂದ ಈ ದ್ರಾಕ್ಷೀನ ಕಂಡಿರ್ಲಿಲ್ಲ. ಅಪರೂಪ್ವಾಗ್ಬಂದಿದೆ ಇದೇ ಸರಿಯಾದ್ಹಣ್ಣು ಶಿವೂಗ್ಕೊಡೋಕೆ ಅಂತಂದದ್ದೆ, "ಎಷ್ಟಪ್ಪ, ಸೇರೊಂದೆ ?" "ಏನಿಲ್ಲಾ ಸಾರ್, Cheap ಅಂದ್ರೆ Cheap. ಒಂದೇ ರೂಪಾಯೀ"ಂದ.... "ಅಬ್ಬಾ. ಇದೇನಿಷ್ಟೇಳ್ತೀಯಾ" ?ಂದೆ. "ಬೇರ್ಯೋರ್ಗೆ ಒಂದೂವರೆ ಸಾರ್. ನಿಮ್ಗೋಸ್ಕರ ಒಂದ್ರೂಪಾಯಿ"ಂತಂದ. "ಅದೇನಪ್ಪ Speciality ನಂಗೆ ?"

ಅಂತ್ಕೇಳುತ್ಲೂ, "ನಿವಾಸ್ಪತ್ರೇಗ್ಹೋಗ್ತಿದ್ದೀರಿಂತ ಕಮ್ಮಿ ಹೇಳ್ದೇ"ಂದ. "ಅರರೆ! ಇವ್ನಿಗ್ಹ್ಯಾಗ್ಗೊತ್ತಾಯ್ತು ನಾನಾಸ್ಪತ್ರೇಗ್ಹೋಗೋದೂ"ಂತಂದ್ಕೊಂಡು, "ಪರ್ವಾಗಿಲ್ಲ ಕಣಯ್ಯ, ಸೈಕಾಲಜಿ ಕೂಡ ಕಲ್ತಿರೋ ಹಾಗಿದೆ ನೀನೂ"ಂತ ಹೊಗಳಿಡೆ. "ಹೌದ್ಸಾರ್, ನಮ್ಮಪ್ಪ ಸೈಕಲ್‌ಷಾಪಿಟ್ಟದ್ದಾಗ ಅದ್ನೂ ಕಲ್ಸಿದ್ದಾನ್ನಮ್ಗೆ"ಂತ ನಂಗೇ ದಬಾಯಿಸ್ದ ಆ ಸಾಬಿ.

ಕಡೇಗ್ಹಾಗೂ ಹೀಗೂ ಚೌಕಾಶೀಮಾಡಿ, "ಒಂದಚ್ಚೇರ್ತೂಗಯ್ಯಾ"ಂತಂದೆ. ಎತ್ಕೊಳ್ಳೃತ್ಲೇ ತಕ್ಕಡೀಗೊಂದೊಡ್ಜೊಂಪೆ ಹಾಕ್ದ. ಆ ತಕ್ಡೀಗದ್ಭಾರವಾಗಿ ವಾಲುತ್ಲೂ ಅದನ್ತೆಗ್ದದ್ದೇ ಒಂದ್ಸಣ್ಜೊಂಪೆ (ಒಂದು ಪಾವು ತೂಗೋಹಾಗಿತ್ತೂನ್ನಿ) ಹಾಕಿದ್ದೇ, "ನೋಡೀ ಸಾರ್, ಸರ್‍ಯಾಗಿದೇ"ಂತ ನನ್ಕೈಗ್ತುರುಕೇಬಿಟ್ಟ, ನಾನ್ಕೇಳಿದ್ವೆಲೇಗವ ನ್ಕೊಟ್ಟೆರೋವಾಗ ಅವನ್ಕೊಟ್ಟೊತಕಾನ ಒಪ್ಕೊಳ್ಬೇಡ್ವೇ?


ಜೇಬಿಗ್ಹಾಕ್ಕೊಂಡೆ ಜೊಂಪೆನ. ಅಂಗ್ಡಿಯೋನಿಗ್ದುಡ್ಕೊಟ್ಟು ಹೊರಬಿದ್ದೆ ಮಾರ್ಕೆಟ್ನಿಂದ ಆಸ್ಪತ್ರೆ ಕಡೇಗೆ. ಎರಡ್ಹೆಜ್ಜೆ ಹಾಕೊಪ್ರಲ್ಲಿ, "ಕಾಬೂಲ್ದ್ರಾಕ್ಷಿ ತಿಂದಾಗ್ಲೇ ವರ್ಷಗಳಾಗ್ಹೋದ್ವು. ಇಷ್ಟು ವರ್ಷಕ್ಮೇಲ್ಬಂದಿರೋ ದ್ರಾಕ್ಷಿ ರುಚಿ ಹೇಗಿರುತ್ತೋ"ಂತ ನಾಲ್ಗೇಲ್ಬಾಧೆಯಾಯ್ತು. "ಒಂದೇ ಒಂದ್ಹಣ್ಣನ್ನ ಹಾಗೆಸೆದ್ಬಿಡೂ, ಇನ್ಕೇಳುಲ್ಲಾ"ಂತ್ಲೂ ನಾಲ್ಗೇ ಕೇಳ್ಕೊಂಡ್ತು... ಥಟ್ನೆ, ಜೇಬ್ನಲ್ಲಿದ್ಜೊಂಪೆಯಿಂದ ಒಂದ್ಹಣ್ಣು ಹಾರ್‍ತು ಬಾಯ್ಗೆ .. ನಮ್ಮೂರ್‍ನಲ್ಲಿ ಹಾಳ್ ಚಪ್ಪರದ್ರಾಕ್ಷಿ ಬೆಳೀತಾರೆ— ಈ ದ್ರಾಕ್ಷಿ ಮುಂದೆ ಅದೆಲ್ಲೀಂತ ಕೈ ಪುನಃ ಮೆಲ್ಲಗೆ ಜೇಬಿಗಿಳೀಬಿತ್ತು....ಕಾಬೂಲ್ನಲ್ಲಿರೋ ರೈತರ್ನೆಲ್ಲಾ ಹೊಗಳ್ತಾ ಹೊಗಳ್ತಾ ನನ್ನಾಲ್ಗೆ ಮೆಲ್‌ಮೆಲ್ಗೇ ದ್ರಾಕ್ಷೀನೊಂದೊಂದಾಗೇ ಮೆಲ್ತಾ ಮೆಲ್ತಾ, 'ವಾರ್ಡ್' ಕಡೆ ಕಾಲ್ಹಾಕಿಸ್ತಾ ಇತ್ತು ... ವಾರ್ಡ್ ಬಾಗಿಲ್ಹತ್ರ ಹೋಗಿ ಜೇಬ್ಮುಟ್ನೋಡ್ದೆ....ಒಳಗಿನ್ನೂ ಇದ್ದಾಗಿತ್ತು ದ್ರಾಕ್ಷಿ. "ಪರ್ವಾಗಿಲ್ಲ, ಶಿವೂಗ್ಕೊಡೋಷ್ಟಿದೇ"ಂತ ವಾರ್ಡ್‌ನೊಳಕ್ನುಗ್ದೆ....ಎದುರ್ಬಿದ್ದ 'ವಾರ್ಡ್‌ಬಾಯ್' "ಟೈಂ ಆಗ್ಹೋಯ್ತು ಒಳಗ್ಬಿಡೊಲ್ಲಾ"ಂತಂದ ..." ಇಲ್ಲಪ್ಪಾ, ಒಂದೈದೇ ಐದ್ನಿಮಿಷ" ಅಂತಂದೆ. ಅವನ್ಕೇಳಿದ್ರೆತಾನೇ?....ಹೊರ್ಟೆ, ಆರ್. ಎಂ. ಓ. ಆಫೀಸ್ಕಡೆ....ಹೆಜ್ಜೆಮೇಲ್ಹೆಜ್ಜೇ ಹಾಕ್ತಾ, ಈ ಆಸ್ಪತ್ರೆ ರೂಲ್ಸಿನ ಬೇಜಾರ್‍ಕಳ್ಕೊಳ್ಳೀಕೆ ಕೈ ಸುಮ್ನಿರ್ದೆ ಜೇಬ್ಗೂ ಬಾಯ್ಗೂ ದಾರಿತೋರಿಸ್ತಿತ್ತು....ನನ್ನ ಸೂಟ್ನೋಡ್ಯೋ ಏನೋ, ಆರ್. ಎಂ. ಓ. ಪಾಪ, "ಇವನ್ನೊಳಕ್ಬಿಡೀ"ಂತ ಚೀಟಿ ಕೊಟ್ರು. ಅಲ್ಲಿಂದ್ಪುನಃ ವಾರ್ಡಿಗ್ಬಂದೆ. 'ವಾರ್ಡ್‌ಬಾಯ್' ಕೆಂಗಣ್ಣಿಂದ್ಲೇ ಒಳಕ್ಬಿಟ್ಟ....ಶಿವೂ 'ಬೆಡ್' ಹತ್ರನಿಂತೆ. ಅವ್ನೇ ಮಾತ್ನಾಡ್ದ ಪಾಪ.

ಜೇಬಿಗ್ಕೈಹಾಕ್ದೆ ಹಣ್ಕೊಟ್ಕೇಳೋಣ ಕುಶಲಾನಾಂತ....ಕೈಗ್ಮರಮುರಾಂತ ಚುಚ್ಕೊಂತೇ ಹೊರ್ತು ಜೊಂಪೇಲೊಂದ್ಹಣ್ಣೂ ಕೈ ಗಂಟ್ಲಿಲ್ಲ. ಅಯ್ಯೋ ಶಿವನೇ! ಹಾಳ್ನನ್ನಾಲ್ಗೇ, ಸವೀ ತಡೀಲಾರ್ದೆ ಫಲಹಾರ ಪೂರೈಸ್ಬಿಟ್ಟಿದೆ. ತಕ್ಷಣ ಕೇಳ್ದೆ

ಶಿವೂನ, "ಏನ್ನೈವೂ, Fruits ತಿನ್ಬೇಕ್ಕೈನ್ನಾಗ್ನೀನು. ಈ ವತ್ತು ಬರೀಕೈಲ್ಬಂದ್ಬಿಟ್ಟೆ ಕಡೆಗೊಂದೆರ್ಡು ಕಿತ್ಳೇ ಹಣ್ಣಾದ್ರೂ ತರ್ಬೇಕಾಗಿತ್ತೂ"ಂತಂದೆ... ಅವ್ನು ಥಟ್ನೆ, "ಅಯ್ಯೋ ಸದ್ಯ ತರ್ಲಿಲ್ವಲ್ಲಾ....ಡಾಕ್ಟ್ರು ಯಾವ್ದಣ್ಣೂ ತಿನ್ಕೂಡ್ದೂಂತ್ಹೇಳಿದ್ದಾರೆ. ಅದ್ರಲ್ಲೂ 'ಕಾಬೂಲ್ದ್ರಾಕ್ಷೀನ ಯಾರಾದ್ರೂ ತಂದ್ಕೊಟ್ಟಾರು ತಿಂದ್ಬಿಟ್ಟೇಯೇ ಜೋಕೇ'ಂತ ಅಂದ್ರು ನಿನ್ನೆ" ಅಂತ ಅಂದ. "ಸದ್ಯ ಗೆದ್ದೇ"ಂದ್ಕೊಂಡೆ.

ಮನೇಗ್ಬಂದೆ. ಸಾಮಾನ್ ವಗೈರೆ ಖರ್ಚು ಜಾತ ಉಳಿದ ಚಿಲ್ರೇನ ಅಣ್ಣನಿಗ್ಕೊಟ್ಟೆ. ಅಣ್ಣ ದುಡ್ಡೆಣಿಸ್ಕೊಂಡು, "ಇದೇನೋ, ಎಂಟಾಣೆ ಕಮ್ಮಿ" ಅಂದ್ರು.... "ಅಯ್ಯೋ, ಹೇಳೋದ್ಮರೆತ್ಬಿಟ್ಟೆ... ನನ್ನ Friend ಶಿವು ಆಸ್ಪತ್ರೇಲಿದ್ದಾನೆ. ನೋಡೋಕ್ಹೋಗಿದ್ದೆ. ಎಂಟಾಣೆ Fruits ತೊಗೊಂಡ್ಹೋಗ್ಕೊಟ್ಟೆ ಅಣ್ಣಾ"ಂದೆ ...."ಹೋಗ್ಲಿ ಅಷ್ಟಾದ್ರು ಧರ್ಮಬುದ್ಧಿ ಇದ್ಯಲ್ಲಾಂ"ತಂದ್ರು....ಆದ್ರೆ....?

"ನಾಗ್ರಾಜ್ಪಂಡಿತ್"



"ಫೀಜು ನಾವು ಕೊಡುವಷ್ಟೇ ನೀವೂ ಕೊಡಬೇಕೆಂದರೆ ನಿಮಗೇಕೆ ಇಷ್ಟು ಕೋಪ ? ಇದುವರೆಗೆ ನೀವು ಹೊಡೆದಾಡುತ್ತಿದ್ದುದು—ನಾವೂ ಗಂಡಸರ ಸರಿಸಮಾನವಾಗಿರಬೇಕೆಂದು ತಾನೆ?"

ಯಾತ್ರಿಕರ ಪತ್ರ

[೩]

ರಾಜಿ ನನ್ನನ್ನೆಬ್ಬಿಸಿದಾಗ ಬಿಸಿಲೇರಿತ್ತು. ಗೌಡ, ಬೈಲಿ, ಗೌಡನ ಮಗ, ಚಂದೀ ಗಾಡಿಯಿಂದಿಳಿದಿದ್ದರು. ಚಂದೀ ನಮ್ಮ ಸೈಕಲ್ಲುಗಳಿಂದ ಹುಲ್ಲು ತೆಗೆಯು ಯುತ್ತಿದ್ದ. ನಾನೆದ್ದೊಡನೆಯೇ, ನನ್ನ ಕಡೇ ತಿರುಗಿ "ಭಲೇ ಕುಂಬಕರ್ಣಾ—ಊರೆಲ್ಲಾ ಸೂರೆಹೋದರೂ ಗಾಢ ನಿದ್ರೆ ಮಾಡ್ತೀಯಯ್ಯಾ ನೀನು! ಇಳಿದು ಸ್ವಲ್ಪ ವಾದರೂ ಮೈ ಬಗ್ಗಿಸಿ ಕೆಲಸಕ್ಕೆ ಕೈಹಾಕು. ಕೀಲುಗಳನ್ನ ಸಡಿಲಿಸು" ಅಂತ ಹಾಸ್ಯಮಾಡಿದ.

ನನಗೆ ರೇಗಿತು "ಲೋ ಚಂದೀ, ನಿಂಗೇನು ಕೆಲಸ ಅನ್ನೋದೇನು ಗೊತ್ತೇನೋ-ಇವತ್ತೇನೋ ಅಪರೂಪಕ್ಕೆ ಎಚ್ಚರವಾಗಿದ್ದೀ. ನೀಹೇಳಯ್ಯ ರಾಜಾ-ಚಂದೀ ಯಾವಾಗ್ಲಾದ್ರೂ ಕೆಲಸ ಮಾಡಿದ್ದು ನೋಡಿದ್ದೀಯಾ?" ಅಂತ ರಾಜನ ಸಾಕ್ಷಿ ಕೇಳಿದೆ.

ಅದಕ್ಕೆ ರಾಜಾ "ನಾನೇನೋ ನೋಡಿಲ್ಲ ಅಪ್ಪ. ಚಂದೀ, ತಿಂಡಿ ಟೈಂ ಬಿಟ್ಟು ಎಚ್ಚರವಾಗಿರೋದೇ ಅಭಾವ" ಅಂತ ಒಪ್ಪಿದ.

ಆಗ ಚಂದೀ "ಹೌದೋ ರಾಜ, ನೀ ಬಹಳ ಕಡೀತೀ." ನನ್ನ ಕಡೆ ತಿರುಗಿ "ನೀ ಹೇಳಯ್ಯ—ರಾಜಂಗೆ ಕೆಲಸ ಅಂದ್ರೆ ಅರ್ಥವೇನಾದ್ರೂ ಗೊತ್ತೇನೊ?" ಅಂತ ಕೇಳಿದ.

ನಾನು ನಿಜಾಂಶ ಹೇಳಬೇಕಾಯಿತು.

"ನನಗೆ ಗೊತ್ತಿದ್ದ ಹಾಗೆ ರಾಜಂಗೂ ಕೆಲಸಕ್ಕೂ ದೂರವೇ-ದ್ವೇಷ, ಶತೃತ್ವ" ಅಂದೆ.

ರಾಜನ ಮುಖದಲ್ಲಿ ಕೆಂಪೇರಿತು. ನನ್ನ ಕಡೆ ಕೈ ತೋರಿಸಿ "ಹೋಗಲಿ ಬಿಡಯ್ಯಾ—ನಿನಗಿನ್ನ ಜಾಸ್ತಿ ಕೆಲಸ ಮಾಡಿದ್ದೇನೆ" ಅಂದ.

"ಹೌದಯ್ಯಾ—ಅವನಿಗಿನ್ನ ಕಮ್ಮಿ ಮಾಡೋಕೆ ಹೇಗಯ್ಯಾ ಸಾಧ್ಯ?" ಅಂದ ಚಂದೀ.

ಇಬ್ಬರು ನನ್ನ ಕಡೆ ನೋಡಿ ನಕ್ಕರು. ಬೆಂಗಳೂರಿಂದ ಇವರಿಬ್ಬರನ್ನೂ ಕಟ್ಟಿ ಕೊಂಡು ಇವರಿಗಾಗಿ ದುಡಿದು ಬೆವರು ಸುರಿಸಿ ಸಾಗಿಸಿಕೊಂಡು ಬಂದಿದಕ್ಕೆ ಇದೇ ಇವರು ನನಗೆ ಕೊಟ್ಟ ಕಿರೀಟ. ಹೀಗೆ ಪ್ರಪಂಚ ಅಂದುಕೊಂಡೆ.

ಅಷ್ಟರಲ್ಲಿ ಗೌಡನ ಮಗ ಒಂದು ಕೊಡದಲ್ಲಿ ನೀರು, ಒಂದು ಚೊಂಬು, ಒಂದು ಸಾಬೂನು—ಹಳ್ಳೀಲಿ ಕೂಡ ಈಗ ಸೀಗೆಕಾಯಿ ಘಾಟಾಗೊಲ್ಲ—ಎಲ್ಲಾ ತಂದ. ಜೊತೆಗೆ ಗೌಡ ಒಂದು ತಟ್ಟೆ ತುಂಬ ಬಾಳೆಹಣ್ಣು, ಫರಂಗಿಹಣ್ಣು, ಒಂದು ಚೊಂಬು ಹಾಲು ತಂದು ತನ್ನ ಮನೆ ವರಾಂಡದಲ್ಲಿ ಒಂದು ಚಾಪೆ ಹಾಸಿ ಮೇಲಿಟ್ಟ. ನಾವೂ ಕೈ ಕಾಲು ತೊಳೆದು, ವರಾಂಡದಲ್ಲಿ ಕೂತು—ತಂದಿಟ್ಟ ಹಣ್ಣು ಹಾಲು ಮುಗಿಸಿದೆವು.

ರಾಜ ನಿಂತಿದ್ದ ಗೌಡನ್ನ ನೋಡಿ "ಕೂರಿ ಗೌಡ್ರೆ. ನಿಮ್ಮೂರಲ್ಲಿ ಭೂಮಿ ಉಳೋಕೆ–ಟ್ರಾಕ್ಟರ್ ಅಂತ ಬಂದಿವೆಯಲ್ಲಾ–ಉಪಯೋಗಿಸಿದ್ದೀರಾ? ಅದರಿಂದ ನಿಮಗೆ ಬಹಳ ಉಳಿತಾಯವಾಗುತ್ತೆ—ಜಾಗ್ರತೆ ಕೆಲಸವಾಗುತ್ತೆ, ಈ ಬಡಕಲು ಎತ್ತುಗಳಿಂದ ಸಾಧ್ಯವಾಗದ ಕೆಲಸವೆಲ್ಲಾ ಮಾಡುತ್ತೆ. ನೋಡಿ—ಈಗ ರಷ್ಯಾ, ಅಮೆರಿಕಾ ದೇಶಗಳಲ್ಲಿ ಒಳ್ಳೇ ಮರುಳು ಕಾಡುಗಳಿದ್ದಂಥ ಜಮೀನುಗಳನ್ನ ಯಂತ್ರ ಗಳಿಂದ ಸಾಗುವಳಿ ಮಾಡಿ– ಪ್ರಪಂಚಕ್ಕೇ ಅವು ಕಣಜಗಳಾಗಿಬಿಟ್ಟವೆ—" ಅಂದ.

ಗೌಡ "ಹೌದು ಸ್ವಾಮೀ, ನಾವೂ ಅಂಗೇ ನಂಬಿದ್ವು. ಆ ಟರಾಕ್ಟರನ್ನೂ ತರಿಸಿದ್ವು ಬುದ್ಧೀ. ಆದರೆ ಅದೇನು ಆ ಟರಾಕ್ಟರ್ ತಪ್ಪೋ, ನಮ್ಮ ತಪ್ಪೋ, ಅಥವಾ ಅವುಗಳ್ನ ತರಿಸಿಕೊಟ್ಟ ಅಧಿಕಾರಿಗೊಳ್ಗೇ ಅದರ ಮರ್ಮ ಗೊತ್ತಿಲ್ವೋ— ಅಂತೂ ಅವೆಲ್ಲಾ ನಂಬಸವನಿಗಿಂತಾ ಬೇಗ ಸುಸ್ತಾಗಿ ಬಿದ್ವು. ಬಿದ್ದಮೇಲೆ ಅದನ್ನ ಎತ್ತೋರುಕೂಡ ಇಲ್ಲ. ಅಂಗಾಗಿ ಇವೂರಾಗೆ ನಾಲ್ಕಾರು ಟರಾಕ್ಟರ್ ಹೆಣ ಬಿದ್ದವೆ" ಅಂದ.

ನಂಗಾಶ್ಚರ್ಯವಾಯಿತು. "ಹಂಗಾದ್ರೆ ಅವುಗಳಿಂದ ನಿಮಗೇನೂ ಪ್ರಯೋ ಜನವಾಗಲಿಲ್ಲವೇ" ಅಂತ ಕೇಳಿದೆ,

ಅದಕ್ಕೆ ಗೌಡ "ಆಯ್ತು ಬುದ್ಧೀ ಆಯ್ತು. ವಶೀ ಹೈದರು ಆ ಟರಾಕ್ಟರ್‌ಗಳ ಮೇಲೆ ಕುಂತು ಈ ಹಳ್ಳಿ ಬಿಟ್ಟು ಪಟ್ಟಣದಾಗೆ ಬಸ್‌ನಲ್ಲಿ ಸೇರವ್ರೆ—ಕಂಡಕ್ಟರ್ ಗಳಾಗಿ. ಅಷ್ಟೇನೇವೇಯೋ" ಅಂದ.

ಮುಂದುವರಿದು "ಆದರೆ—ಅವುಗಳ ಉಪಯೋಗ ನಮಗೆ ಸರಿಯಾಗಿ ತೋರಿಸಿ, ಆಗಾಗ ಬಂದು ಅದನ್ನ ರಿಪೇರಿ ಮಾಡಿ....ಹೋಗಿ ಬುದ್ಧಿ ಅವೆಲ್ಲಾ ಒಂದು ಕನಸಾ!" ಅಂದ.

"ಎಲ್ಲೋ ಡಿದ್ರೂ misfits ಕಣ್ರೋ—ನಮ್ಹಾಂಗೆ" ಅಂದ ಚಂದಿ. ನಾವು ನಾವು ನಮ್ಮ ಗೌಡನ ಹಳ್ಳಿ ಬಿಟ್ಟಾಗ ಮೂರು ಘಂಟೆಗಳಾಗಿದ್ದವು. ಆಗಲೂ ನಮ್ಮನ್ನು ಬಿಡದೆ ಗೌಡ ನಮಗೆ ಒಂದು ಚಿಪ್ಪು ಬಾಳೇಹಣ್ಣು ಮೂರು ಎಳೆನೀರು

ಗಂಟ್ಹಾಕಿದ—ನಮ್ಮ Tea-Timeಗೆ. ಆ ಟೈಮೂ ಬಂದು, ರಸ್ತೆ ಪಕ್ಕದಲ್ಲೇ ಇದ್ದ ಒಂದು ಮೈದಾನಕ್ಕೆ ನುಗ್ಗಿ, ನಮ್ಮ ವಾಹನಗಳನ್ನು ಒಂದುಕಡೆ ಕೆಡವಿ ಹಣ್ಣಿನ ಬುತ್ತಿಯನ್ನು ಮುಂದಿಟ್ಟುಕೊಂಡು ಒಂದು ಮರದ ನೆರಳಲ್ಲಿ ಕೂತೆವು. ಏಳನೇ ಬಾಳೇ ಹಣ್ಣಿನ ಸಿಪ್ಪೆ ಸುಲಿಯುತ್ತಿದ್ದಾಗ ನಮ್ಮ ಹಿಂದೆ ಒಬ್ಬ ಆಸಾಮಿ ಇದ್ದದ್ದು ನನಗೆ ತಿಳಿಯಿತು. ನಮ್ಮನ್ನೇ ದುರುಗುಟ್ಟಿ ನೋಡುತ್ತಿದ್ದ. ನಾವೂ ನೋಡುತ್ತಿದ್ದೆವು—ಬಾಳೇಹಣ್ಣನ್ನು ಅಗಿಯುತ್ತ, ಇದ್ದಕ್ಕಿದ್ದ ಹಾಗೆ-ಮೋಡಗಳ ಮಧ್ಯದಿಂದ ಗುಡುಗು ಹೊರಬಿದ್ದ ಹಾಗೆ ಅವನ ಮೀಸೆ ಪೊದೆಯೊಳಗಿಂದ ಶಬ್ದ ಹೊರಬಿತ್ತು.

"ನೀವ್ಯಾರ್ರೀ? ನಿಮಗ್ಯಾರು ಈ ಜಮೀನಿನ ಮೇಲೆ ಕಾಲಿಡೋಕ್ಕೆ ಹೇಳ್ದೋರು?" ಅಂತ ಘರ್ಜಿಸಿದ.

ರಾಜ ಅದಕ್ಕೆ ನಿಧಾನವಾಗಿ "ನೀನ್ಯಾರಪ್ಪಾ? ಈ ಜಮೀನಿನ ಮಾಲೀಕರೋ? ಆಗಲಿ ಬಾಪ್ಪಾ-ಬಾಳೇಹಣ್ಣಿದೆ-ಎಳನೀರಿದೆ-ವಶೀ ಥಂಡೀ ಮಾಡ್ಕೋ" ಅಂದ.

ಆಸಾಮಿ ಜಗ್ಗಲಿಲ್ಲ.

"ರ್ರೀ—ಇವೆಲ್ಲಾ ನನ್ನತ್ರ ಜಗ್ಗೋಕಿಲ್ಲ. ನಮ್ಮೆಜಮಾನ್ನವ್ರಲ್ಲಾ—ಥಡ್ಡೀಗೌಡ್ರು-ನಾನವರ 'ಪೀವನ್ನು' ಇಲ್ಲಿ ಯಾರ್ನೂ ಬರ್ಲಿಕ್ಕೆ ಅಕ್ಕಿಲ್ಲ" ಅಂದ.

ಆಗ ಚಂದಿ—"ಓ-ಥಡ್ಡೀಗೌಡ್ರು ನಂಗೊತ್ತು ಹೋಗಿ ಹೇಳಪ್ಪಾ-'ಇಂಗೇ ಮೂರುಜನ ನಿಮುಗಿನ್ನಾ ಥಡ್ರು ಬಂದವ್ರೆ. ಜಮೀನಿನ ಮೇಲೆ ಕುಂತವ್ರೆ, ಒಂಟೋಗೋವಾಗ ಜಮೀನನ್ನ ಅಲ್ಲೇ ಬಿಟ್ಹೋಗ್ತಾರಂತೆ' ಅಂತ. ಹೋಗು" ಅಂತ ವಿನಯದಿಂದ ಹೇಳಿದ.

ರಾಜ—ಥಡ್ಡೀಗೌಡ್ರ ಪೀವನ್ನು ಕದಲದೇ ಇದ್ದದ್ದನ್ನ ನೋಡಿ "ಹೋಗು! ?" ಅಂದ.

ರಾಜನ ಕಾಲ್ಚೀಲದ ಸೈಜು ಹದಿನಾರು. ಆ ಸೈಜು ಸಿಗೊಲ್ಲ—ರಾಜ ಹಾಕೊಲ್ಲ. ಅಂತೂ ಆ ಸೈಜು ನೋಡಿ ಥಡ್ಡೀಗೌಡ್ರ ಪೀವನ್ನು ಕದಲಿದ.

"ಆಗಲಿ—ಯಜಮಾನ್ರನ್ನೇ ಕರ್ಕೊಂಡು ಬತ್ತೀನಿ" ಅಂತ ಹೋದೋನು ಮತ್ತೆ ಅವನೂ ಬರಲಿಲ್ಲ. ಅವನ ಯಜಮಾನನೂ ಬರಲಿಲ್ಲ. ರಾಜ ಅಂದ "ಡ್ಯಾಮಿಟ್! ಇವರ್ಗೆಲ್ಲಾ ಬುದ್ಧೀ ಕಲಿಸಬೇಕ್ರೋ, ಇವರ ಜಮೀನಿನ ಮೇಲೆ ಕೂತರೆ ನಮಗೆಷ್ಟಂಟ್ಕೊಂಡೀತೋ? ಇವರ ಜಮೀನಿನ ಪೀಡೆ? ನಂಗನ್ನುತ್ತೆ-ಈ.... ಕ್ಕಳ್ನೆಲ್ಲಾ ಅವರವರ ಜಮೀನಿನಲ್ಲೇ ಹೂತು, ಮಣ್ಣು ಮುಚ್ಚಿ ಅದರ ಮೇಲೆ ಒಂದೊಂದು ಹುಣಿಸೇಮರ ಬೆಳೆಸಬೇಕು ಅಂತ".

ರಾಜ ಹೀಗೆ ಹಿಟ್ಲರ್‌ಥರ ಮಾತಾಡಿದ್ದು ನನಗೆ ಸರಿಬೀಳಲಿಲ್ಲ. ಕಾಲು ಘಂಟೆ ಕಾಲ ಅವನಿಗೆ ಸಮಾಧಾನ ಹೇಳಿದೆ. ಆದರೂ ರಾಜ "ಹೋಗಯ್ಯಾ-ಅಷ್ಟಕ್ಕೇ ಅವರನ್ನ ಬಿಡೊಲ್ಲ. ಹುಣಿಸೇಮರ ಬೆಳೆದಮೇಲೆ ಅದರ ಸುತ್ತ ಕುಣ್ಕೊಂಡು ಹಾಡೂ ಹಾಡ್ತೇನೆ" ಅಂದ.

ನಾನೂ ಚಂದೀ ಇಬ್ಬರೂ ಸೇರಿ ರಾಜನ್ನ ಸಮಾಧಾನ ಮಾಡಿ, ಗಾಂಧೀ ತತ್ವ—ಅಹಿಂಸೆ ಇವೆಲ್ಲಾ ಅರ್ಧ ಘಂಟೆ ಕಾಲ ಭೋದಿಸಿದಮೇಲೆ ಸ್ವಲ್ಪ ಶಾಂತವಾದ. ಅಂತೂ ಏನೇ ಮಾಡಲಿ-ಹಾಡಂತೂ ಹೇಳೊಲ್ಲಾ ಅಂತ ಒಪ್ಪಿದ. ನೀವು, ರಾಜ ಹಾಡಿದ್ದು ಕೇಳಿಲ್ಲ, ಕೇಳಿದ್ದರೆ ಗೊತ್ತಾಗ್ತಿತ್ತು—ನಾವು ನಿಮಗೆಷ್ಟು ಉಪಕಾರ ಮಾಡಿದೆವು ಅಂತ.

ಮಸಲಾ—ಯಾವುದಾದರೊಂದು ಸಮಾರಂಭ ಸೇರುತ್ತೇಂತ ಇಟ್ಟುಕೊಳ್ಳಿ ಅದಕ್ಕೆ ರಾಜಾನೂ ಬಂದಿರ್ತಾನೆ ಅನ್ನಿ. ಸರಿ-ಅವನ್ನ ಎಲ್ಲಾ ಎಲ್ಲಾರೂ ಛೇಡಿಸಿ "ಒಂದು ಹಾಡಯ್ಯಾ" ಅಂತಾರೆ. ಆಗ ರಾಜ ಬಹಳ ಬಿಂಕವಾಗಿ ನಗುತ್ತಾ—

"ನಂಗೇ ಕೈಲಾಸಂ ಕವನ ಬಿಟ್ರೆ ಬೇರೇನೂ ಬರೊಲ್ಲ" ಅಂತಾ ಹೇಳ್ತಾನೆ. ಅವನು ಹೇಳೋರೀತೀಲಿ ನಾವೆಲ್ಲಾ ಕೈಲಾಸಂ ಪುನಹ ಭೂಮಿಗಿಳಿದರು ಅಂದ್ಕೊಳ್ತೀವಿ. ಸರಿ-ಎಲ್ಲರ ಬಾಯ್ಯ್ಯಾ-ಅಥವಾ ಕಿವೀಲೊ?-ನೀರೂರಿ-ಅವರವರ ಜಾಗ ಸರಿಮಾಡಿಕೊಂಡು ಕಿವಿ ವರಸಿಕೊಂಡು ಕುತ್ಕೊತ್ತೇವೆ.

ರಾಜ "ಸ್ವಲ್ಪ ಮೆಣಸು ಉಪ್ಪು ಬೇಕು" ಅಂತಾನೆ. ಕೂಡಲೇ ಒಂಭತ್ತು ಜನ ಒಟ್ಟಿಗೆ ಒಂದು ಪಾವು ಮೆಣಸು ಒಂದು ಸೇರು ಉಪ್ಪು ತಂದು ರಾಜನ ಮುಂದೆ ಸುರೀತೇವೆ, ಅದರಲ್ಲಿ ರಾಜ ಒಂದೇ ಒಂದು ಮೆಣಸು, ಒಂದು ಕಲ್ಲು ಉಪ್ಪು ಹುಡುಕಿ ಆರಿಸಿ ಬಾಯ್ನಲ್ಲಿ ಹಾಕ್ಕೊಂಡು ಶುರು ಮಾಡ್ತಾನೆ.

"ಹೂಂ....ಹ್ಲೂಂ....ಹ್ಪ ಇಂ....ನಮ್ಮಿತ್ತಪ್ಪಾರಳ್ಳಿ... ....ಲೋ ಚಂದೀ, ಏನೊ ಅದು ಅಣಕಿಸ್ತೀಯಾ?"

ನಾವೆಲ್ಲಾ ಚಂದೀಕಡೆ ತಿರುಗಿ ಕಣ್ಣುಬಿಡುತ್ತೇವೆ. ಮತ್ತೆ ರಾಜ "ಹ್ಲೂ—ನಮ್ಮಿತ್ತಪ್ಪಾರಳ್ಳಿ....ಬಲುದೂರ...." ಸಭಿಕರಲ್ಲೊಬ್ಬ "ಮುಂದ್ಹೇಳೊ"

ರಾಜ "ಹೇಳ್ತೀನೋ....ನಿಮ್ಮಿತ್ತಪ್ಪಾರಳ್ಳಿ ಬಲುದೂರ—ಬಲು ದು....ರಾ.... ಆಂ....ಬಲು ದೂ....ರ...."

ಮತ್ತೊಬ್ಬ "ಮುಂದೆ ಮರ್‍ತಿದ್ದಾನ್ಕಣ್ರೋ - ಹೇಳೀಲೇ—'ಆ ವೂರ್ನಲ್ಲಿ' ..."

ರಾಜ "ನಂಗೊತ್ತೋ—Confuse ಮಾಡಬೇಡವೊ"

ಚಂದಿ "ಹೌದ್ಕೊ-ಸಾವಧಾನದಿಂದ ಕೇಳ್ರೋ. Confuse ಮಾಡ ಬೇಡಿ-ಪಾಪ"

ರಾಜ "ನಮ್ಮಿತ್ತಪ್ಪಾರಳ್ಳಿ ಬಲುದೂರ–ಆ ವೂರ್ನಲ್ಲಿಂಬಸವ್ಯವ್ವೆ....ಅಲ್ಲೇ ನಿಲಿಗಳಕಾಟ–ಅಲ್ಲಿನ...." ಬಾಕಿ–ಸಭಿಕರ ಕೂಗಾಟದಲ್ಲಿ ಮುಳುಗುತ್ತೆ.

ರಾಜ ಕೈ ಕೈ ಹಿಸುಗಿಕೊಳುತ್ತಾ "ಸುಮ್ನಿರ್ರೋ—ನೀವು Confuse ಮಾಡಿದ್ದರಿಂದ ಒಂದಕ್ಕೊಂದು mix ಆಗ್ಹೋಯ್ತು" ಅಂತಾನೆ. ಆಗ ಚಂದೀ ರಾಜನ್ನ ಸಮಾಧಾನ ಮಾಡಿ "ಪುನಹ ಮತ್ತೊಂದು ದಿನ ಚನ್ನಾಗಿ ಕಲಿತು ಹೇಳುವಿಯಂತೆ–ಬಾ" ಅಂತ ಒಬ್ಬರಿಗೂ ಕಾಣದಹಾಗೆ ಹೊರಕ್ಕೆ ಕರ್ಕೊಂಡು ಬರ್ತಾನೆ.

ಇದೇ ರಾಜನ ಹಾಡುಗಾರಿಕೆ—

ಈ ಪುರಾಣದಲ್ಲಿ ನಾವೆಲ್ಲಿದ್ದೆವು ಅನ್ನೋದೇ ಮರ್ತ್ಹೋಯ್ತು. ಹೂಂ.... ಅದೇ—ತಲಕಾಡಿನ ಕಡೆ ಹೊರಟೆವು.

—ಕೇಪ.



ಗಂಡನ ಕಷ್ಟಗಳಲ್ಲಿ ಒಂದು

ನಿಮ್ಮ ಹುಟ್ಟಿದ ಹಬ್ಬಕ್ಕೇಂತ ಒಂದು ಸ್ವೆಟರ್ ಹಾಕಿ, ಮುಚ್ಚಿಟ್ಟಿದ್ದೆ. ಇವತ್ತೆಲ್ಲಾ ಹುಡುಕಿದೆ ಸಿಗಲೇಇಲ್ಲ. ಈಗ ನಿಮ್ಮ ಮೇಲೇ ಗುಮಾನಿ ನನಗೆ. ಏನು ಮಾಡಿದಿರಿ ಹೇಳಿ ?

ಚಿಂತೆಯ ಕಂತೆ

ವರಾಳಿ — ಝಂಪೆ

ಎಂತಾದರು ಚಿಂತೆ ಬಿಡದು | ನಿ
ಶ್ಚಿಂತರಾದವರಾನೊಬ್ಬರನು ಕಾಣೆ || ಪ ||

ಪೆರಿಯಾರ್‍ಗೆ ಗಣಪನಾ ಭಿನ್ನಮಾಡುವ ಚಿಂತೆ
ಬೆರಿಯಂಗೆ ಶಿರ ನಾಳೆ ಭಗ್ನ ಚಿಂತೆ
ಸಿಂಗ್ಮರೀ ಸಾಹೇಬಗೆ ಕೊರಿಯ ಚಿಂತೆ
ಕಾಜರಾ ಗಡಣಕ್ಕೆ ರಾಜ್ಯಸೇವಕ ಚಿಂತೆ

ವ್ಯಾಜ್ಯ ಹೂಡಿದರದನು ಗೆಲುವ ಚಿಂತೆ
ಟೋಪಿ ಹಾಕಿದ ಚಿಂತೆ, ಟೋಪಿ ಹಾಕುವ ಚಿಂತೆ
ಹೋಪಿಲ್ಲದಿದ್ದರೂ ಪಾಸ ಚಿಂತೆ
ಅನ್ನ ಸಾಲದ ಚಿಂತೆ ಚಿನ್ನ ಸೋಲದ ಚಿಂತೆ

ತನ್ನವನೆ ತೇನ್‌ಸಿಂಗ ಎಂಬ ಚಿಂತೆ
ಭಕ್ತರಿಗೆ ನಿತ್ಯವೂ ಹುಳಿಯೋಗರದ ಚಿಂತೆ
ಸತ್ತರಿಗೆ ಸ್ಮಾರಕ ಬೇಕೆಂಬ ಚಿಂತೆ
ಓಟು ಕಬಳಿಪ ಚಿಂತೆ ಓಟಕೀಳುವ ಚಿಂತೆ

ಒಟ್ಟಾರೆ ಎಲ್ಲರಿಗು ಹೊಟ್ಟೆ ಚಿಂತೆ.

—ಪಾಟೀಲ

ಸಂಸ್ಕೃತಿ

— o —

ಒಂದಲ್ಲ ಎರಡಲ್ಲ ಹದಿನೈದು ಲಕ್ಷ—ಯಾರಿಗುಂಟು ಯಾರಿಗಿಲ್ಲ. ಎಲ್ಲರೂ ಯೋಚಿಸುವ ವಿಷಯವೆ. ಸಂಸ್ಕೃತಿ ಪ್ರಸಾರಕ್ಕಾಗಿ ಶ್ರಮಿಸುವ ಜನತಾ ಸರ್ಕಾರಕ್ಕೆ ನಾವು (ನಾವೇ ನಮ್ಮಿಂದ ಆಳಿಕೊಳ್ಳುತ್ತಿರುವ ಜನಗಳು) ಬೆಂಬಲಿಗರಾಗಿ ನಿಲ್ಲುವುದು ನಮ್ಮ ಧರ್ಮ. ಆದ್ದರಿಂದ ನಮ್ಮ ಸಂಸ್ಕೃತಿಯ ಮೂಲಭೂತರಾಗಿ ಇಂದಿಗೂ ದುಡಿಯುತ್ತಿರುವ ಕೆಳಗಂಡ ಗುಂಪುಗಳಿಗೆ ಈಗಿಂದೀಗಲೇ ಸರ್ಕಾರದೊಡನೆ ಸೇರಿ ಅವರ ಸಂಸ್ಕೃತಿ ಪ್ರಚಾರದಲ್ಲಿ ನೆರವಿತ್ತು ನೀವು ಯೋಗ್ಯ ಪ್ರಜೆಗಳೆನಿಸಿಕೊಳ್ಳುವಿರೆಂದು ನಂಬಿದ್ದೇನೆ.

೧) **ಲೇಖಕ :** ಈ ವರ್ಗದವರೇ ಸಂಸ್ಕೃತಿಯ ಆಧಾರಸ್ತಂಬಗಳು. ಭಾರತ-ರಾಮಾಯಣ ಬರೆದ ಲೇಖಕರ ಪರಂಪರೆಯಲ್ಲಿ ಈತ ನಿಲ್ಲುತ್ತಾನೆ. ವ್ಯಾಸ—ವಾಲ್ಮೀಕಿಯರು ಬರೆದದ್ದನ್ನು ತಿದ್ದಿ-ಜನಸಾಮಾನ್ಯರಲ್ಲಿ ಸಂಸ್ಕೃತಿ ಪ್ರಸಾರ ಮಾಡುವ ಸಾಧನವಾದ ಗ್ರಂಥಗಳ ರಚನೆಮಾಡಿ ಸಂಸ್ಕೃತಿ ಪ್ರಸಾರಮಾಡುತ್ತಾನೆ. ಯಾವಾಗ? ಗ್ರಂಥ ಬರದದ್ದಕ್ಕೆ ಸಂಭಾವನೆ ದೊರೆತಾಗ-ಅಂದಮೇಲೆ ಸಂಸ್ಕೃತಿ ಪ್ರಸಾರಕ್ಕೆ ಗ್ರಂಥ ಬೇಕು - ಗ್ರಂಥಕ್ಕೆ ದುಡ್ಡು ಬೇಕು—ಅರ್ಥಾತ್ ಗ್ರಂಥಕರ್ತನಿಗೆ ದುಡ್ಡು ಬೇಕು. ಹದಿನೈದು ಲಕ್ಷ-ಲೇಖಕರೇ ಜಾಗೃತರಾಗಿ ಸರ್ಕಾರಕ್ಕೆ ಒಂದು ಕೈಕೊಡಿ.

೨) **ಹರಿಕಥೆ ದಾಸರು :** ದಾಸರೆ! ನೀನೇ ಓದುಬಾರದ ಹಳ್ಳಿಗರಿಗೆ ವ್ಯಾಸ ವಾಲ್ಮೀಕಿಗಳ ರಾಮಾಯಣ ಭಾರತಗಳನ್ನು ಹೇಳುವವರು. ಹಳೆಯ ಸಂಸ್ಕೃತಿ ಇವತ್ತು ಇದ್ದರೆ ಅದು ನಿಮ್ಮ ಕಥಾ ಕಾಲಕ್ಷೇಪದಿಂದ-ಅದು ನಾಳೆ ಇರಬೇಕಿದ್ದರೆ ನಿಮ್ಮ ಕಂಚು ಕಂಠ ಬಂದೋಬಸ್ತಾಗಿರಬೇಕು. ಆ ಬಂದೋಬಸ್ತಿಗೆ ಬಾದಾಮಿ ಹಾಲು-ತುಪ್ಪ ಬೇಕು-ಊರಿಂದೂರಿಗೆ ಪ್ರಯಾಣ ಮಾಡುವಾಗ ತಮಗೆ ಆಯಾಸವಾಗಬಾರದು-ಅದಕ್ಕೆ ಸೆಕೆಂಡ್ ಕ್ಲಾಸಿನಲ್ಲಿ ಪ್ರಯಾಣ ಬೆಳಸಬೇಕು. ಇದಿಷ್ಟು ಆಗಬೇಕಾದರೆ ಬರಿ ಕೈಲಿ ಮೊಳ ಹಾಕಲು ಸಾಧ್ಯವೆ? ಇಲ್ಲ. ಸಂಸ್ಕೃತಿ ಪ್ರಸಾರ

ವಾಗಬೇಕಾದರೆ ನೀವು ಬದುಕಬೇಕು-ಬಾಳಬೇಕು ಅದಕ್ಕೆ ನೀವೂ ಕೈ ಚಾಚಿ.... ಹದಿನೈದು ಲಕ್ಷ.

೩) **ಪೂಜಾರಿಗಳು :** ದೇವರಲ್ಲಿ ಭಕ್ತಿ-ಜನರಿಗೆ ಮುಕ್ತಿ ಬರಬೇಕಾದರೆ ನೀವು ಘಂಟೆ ಬಾರಿಸಿ ಮಂತ್ರಹೇಳಿ ಕರ್ಪೂರ ಹಚ್ಚಬೇಕು. ಇನ್ನು ಮುಂದುವರಿದು-ಆಯಾ ಗುಡಿಯ ಸ್ಥಳಪುರಾಣ-ಆ ದೇವರ ಶಿಲ್ಪಿಯ ಚರಿತ್ರೆ ಅವನ ಸಂಸ್ಕೃತಿ ತಿಳಿದು ಬಂದು ಕೈಮುಗಿದ ಭಕ್ತರಿಗೆ ವಿವರಿಸಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡಲು ಮುಖ್ಯಪಾತ್ರವಹಿಸುತ್ತೀರಿ. ಸ್ಥಳಪುರಾಣದ ಸಂಶೋಧನೆಗೆ ಶಿಲ್ಪಿಯ ಚರಿತ್ರೆಯ ವಿವರಗಳನ್ನು ಹುಡುಕಲು ನಿಮಗೆ ಧನಸಹಾಯ ಬೇಡವೆ? ಮತ್ತೇ-ಯಾಕೆ ತಡ ಒಡ್ಡಿ ಮಂಗಳಾರತಿ ತಟ್ಟೇನ ಮುಂದೆ.... ಹದಿನೈದು ಲಕ್ಷ.

೪) **ದುರ್ಗಮ್ಮ, ಮಾರಮ್ಮ ಆಡಿಸುವವರು :** ಚಾಟಿ ಹೊಡೆದುಕೊಂಡು, ಮೈಮೇಲೆ ಬಾಸುಂಡೆ ಬರೆಸಿಕೊಳ್ಳುವುದರಲ್ಲಿ ಏನು ಹಿತವಿದೆ?.... ಆದರಿಂದಲೇ ನಿಮ್ಮ ಹೊಟ್ಟೆ ತುಂಬುವುದು ? ಆ ಬಾಸುಂಡೆಯಮೇಲೆ ನಿಮ್ಮ .ತಾತ ಮುತ್ತಾತಂದರಿಂದ ಪರಂಪರೆಯಾಗಿ ಬಂದ ಸಂಸ್ಕೃತಿ ಇದೆ ಅಲ್ಲವೆ? ಬೀದಿಯಲ್ಲಿ ನಿಂತು ದುರುಮುರುಗಿ ಬಾರಿಸಿ ನಿನ್ನ ಹೆಂಡತಿ ಸಮೇತ ನಿನ್ನ ಸಂಸ್ಕೃತಿ ಪ್ರಸಾರ ಮಾಡುತ್ತಿಲ್ಲವೆ ನೀನು. ಪಾಪ ಆದರೆ ನಿನಗೆ ಊರೂರು ತಿರುಗಲು ಒಂದು ವ್ಯಾನು-ಮತ್ತೆ ಮಾರಮ್ಮ ವಿಷಯ ಸಂಶೋಧನೆ ನಡಿಸಿ ನಿನ್ನ ಸಂಸ್ಕೃತಿ ಪ್ರಸಾರದ ವಿವರದ ಲೆಖ್ಖ ಇಡಲು ಒಬ್ಬ ಬಿಎ,ನೋ ಎಮ್ಮೆನೋ ಬೇಡವೆ?.... ಬೇಕು ಬೇಕು. ನಿನ್ನ ಕಸುಬಿನವರನ್ನೆಲ್ಲಾ ಒಟ್ಟುಗೂಡಿಸಿ ಚಾಟಿ ಹಿಡಿದುಕೊಂಡು ಸರ್ಕಾರಕ್ಕೆ ನೆರವಾಗು.... ಬಾ, ಹದಿನೈದು ಲಕ್ಷದಲ್ಲಿ ಭಾಗಿಯಾಗು.

೫) **ನಾಟಕ ಸಂಘಗಳು :** ನೀವು ಕಲಾವಿಲಾಸಿಗಳಾಗಿರಿ ಅಥವ ನಾಟಕ ವನ್ನೆ ಕಸುಬಾಗಿ ಉಳ್ಳವರಾಗಿರಿ-ನಿಮ್ಮಿಂದಲೇ ಮುಖ್ಯವಾಗಿ ಸಂಸ್ಕೃತಿ ಅನ್ನೋದು ಉಳಿದಿರೋದು. ಭಾರತ-ರಾಮಾಯಣಗಳ ನಾನಾ ವ್ಯಕ್ತಿಗಳನ್ನು ಜೀವಂತವಾಗೇ ಕಂಡಂತೆ (ಅ)ಭಾಸ ಮಾಡುವಿರಿ! ಧರ್ಮರಾಯನ-ಧರ್ಮ, ಕರ್ಣನ-ಕರ್ಮ, ಭೀಮನ ಬಲ, ಕೃಷ್ಣಣ ಕೃತ್ರಿಮ, ದೃತರಾಷ್ಟ್ರನ ಅಂಧತ್ವವನ್ನು—ಜನಜುಂಗುಳಿಗೆ ಮನದಟ್ಟು ಮಾಡುವವರು ನೀವು. ನಮ್ಮ ಸಂಸ್ಕೃತಿಯನ್ನು ಪುನಃ ಪ್ರದರ್ಶನ ಮಾಡುವವರು ನೀವು. ನಿಮ್ಮ ಪರಧೆ-ನಿಮ್ಮ ಬಿಲ್ಲು—ನಿಮ್ಮ ಕಿರೀಟ ಪುಗುಟಿ ಬರುತ್ತದೇನು.... ಬೇಕು ಬೇಕು ಆಡಲು ಒಂದು ರಂಗಮಂಟಪ ಬೇಡವೆ? ಅದನ್ನು ಕಾಂಟ್ರಾಕ್ಟ ಕೊಡಬೇಕು.... ಅಂದರೆ ಟೆಂಡರ್ ಕರಿಯಬೇಕು-ಇದೆಲ್ಲ ನೀವು ಮಾಡಲು ಸಾಧ್ಯವಿಲ್ಲ-ಸರ್ಕಾರ ಸಂಸ್ಕೃತಿ ಪ್ರಚಾರದಿಂದ ಮಾಡಿಸಲಿ?—ಹೂಂ

ಹಾಕಿ ನೀವೂ ಒಂದು ಸವಾಲು, ನಾವೂ ಸಂಸ್ಕೃತಿ ಪ್ರಚಾರಮಾಡುವರೆಂದು— ನೀವೂ ಕೈಯೊಡ್ಡಿ........ಹದಿನೈದು ಲಕ್ಷ.

ಹೀಗೆ—ಸಂಸ್ಕೃತಿಗೆ ಸಂಬಂಧಪಟ್ಟವರೆಲ್ಲಾ ಸೇರಿ ಸಂಘಮಾಡಿಕೊಂಡು—ಕೈಲಾದ ಪ್ರಸಾರ ಮಾಡಿ. ನಮ್ಮ ಸರ್ಕಾರ ನೀವೆಲ್ಲಾ ನಮ್ಮವರು, ನಿಮ್ಮ ಪ್ರತಿನಿಧಿಗಳೇ ಅಲ್ಲಿ ಆಳುವವರು ಅಂದಮೇಲೆ ನೀವೇ ಅವರು ಅವರೇ ನೀವು—ಪರವಾಗಿಲ್ಲ—ಕೇಳಿ ಧೈರ್ಯವಾಗಿ—ಸಂಸ್ಕೃತಿ ಪ್ರಚಾರಕ್ಕೆ ಕಾಂಚನವನ್ನ.

—ಯಜ್ಞ ಪಶು.

[ಅಲ್ಲಾ ! ಯಜ್ಞಪಶು ! ಅ ಇಂದ ಕ್ಷ ತನಕ ಸಂಸ್ಕೃತಿ ಪ್ರಸಾರವನ್ನು ಮಾಡುತ್ತಿರುವ, ಹಾಗೆ ಮಾಡಿ, ಮನೆ ಮಾರಿಕೊಂಡಿರುವ, ನಮ್ಮಂತಹ ಪತ್ರಿಕೆಗಳಿಗೂ ಇದರಲ್ಲಿ ಒಂದು ಭಾಗ ಕೊಡಿಸಬಾರದಾಗಿತ್ತೇ? ಹೆಸರಿಗೆ ತಕ್ಕಂತೆ ನಮ್ಮನ್ನೇ ಯಜ್ಞಕ್ಕೆ ಪಶುವನ್ನಾಗಿ ಆರಿಸಿದೆಯಲ್ಲಾ ! ಕುಲಕ್ಕೇ ಮೃತ್ಯುವಾದ ಕೊಡಲಿಯ ಕಾವಿನಂತೆ, ಇದು ನ್ಯಾಯಮಾ ! ಸಂ.]

— o —

ನಮಗೆ ಮೊದಲೇ ಗೊತ್ತಿತ್ತು

ಮದುವೇ ಮನೆ ಊಟ ಮಾಡಿ ಎಲೆಡಿಕೆ ಜಗಿಯುತ್ತಾ, ಕಾಡ ಹರಟೆ ಕೊಚ್ಚು ತ್ತಿದ್ದರು, ಮದುವಣಿಗನ ಕಡೆಯವರೆಲ್ಲಾ. ಮದುವಣಿಗನ ತಮ್ಮ ಐದನೇ ವರ್ಷ ಮೆಡಿಕಲ್ ಕಾಲೇಜಲ್ಲಿ, ಅಂದಮೇಲೆ ಅವನಿಗಿಂತ ಪ್ರಾಜ್ಞನಾದ ವೈದ್ಯ ಭೂಲೋಕ ದಲ್ಲೇ ಇಲ್ಲ ಅಂತ ಅವನ ಮನಸ್ಸಿನಲ್ಲಿ. ನಾನು ಹೋದಕೂಡಲೇ "ಎಲಡಿಕೆ ಹಾಕ್ಕೊಳ್ಳಿ ರಾಯರೇ" ಅಂತ ಎಲಡಿಕೆ ತಟ್ಟೆ ಮುಂದಿಟ್ಟ. ನನಗೇನೋ ಎಲಡಿಕೆ ಇಷ್ಟ; ಆದರೆ ಈಗೀಗ ಅಡಿಕೆಯನ್ನು ತುಂಬಾ ಸಣ್ಣ ಚೂರಾಗಿ ಮಾಡುತ್ತಾರೆ. ಅಲ್ಲದೆ ಗಟ್ಟಿಯಾಗೂ ಬೇಯಿಸುತ್ತಾರೆ. ಕಾರಣ ಅದು ನನ್ನ ಹಲ್ಲುಗಳ ಕಂಡಿಯಲ್ಲಿ ಮನೆ ಮಾಡಿಕೊಂಡು ನಾಲಿಗೆಯನ್ನು ದಿನವೆಲ್ಲಾ ತರಿಯುತ್ತೆ. ಅದನ್ನು ಹೊರಕ್ಕೆ ತರಿಸಬೇಕಾದರೆ ಒಂದೆರಡು ಬಾರಿ ದಂತವೈದ್ಯನ ಒಳಗೇ ಹೋಗಬೇಕಾಗಿ ಬಂದಿತ್ತು.

ನಾನು ಸುಮ್ಮನೆ ಇದ್ದುದನ್ನು ನೋಡಿ, ಡಾಕ್ಟರ್ ಮರಿ "ಹಾಗಲ್ಲಾ ರಾಯರೇ? ಎಲಡಿಕೆ ಹಾಕ್ಕೊಳ್ಳೀಬೇಕು. ಎಲೆಗಳಲ್ಲಿ ಹಸಿರಿದೆಯಲ್ಲಾ, ಕ್ಲೋರೋ ಫಿಲ್ ಅಂತ ಅದು ಕೆಟ್ಟ ಕ್ರಿಮಿಗಳನ್ನು ನಾಶಮಾಡುತ್ತದೆ. ಅಂದಮೇಲೆ ದುರ್ವಾ ಸನೆಯನ್ನು ತೆಗೆದುಹಾಕುತ್ತದೆ. ಅಂದರೆ ಹಲ್ಲುಗಳು ಭದ್ರವಾಗಿ ಶಾಶ್ವತವಾಗಿರು ತ್ತವೆ. ಜೀರ್ಣಶಕ್ತಿ ಚೆನ್ನಾಗಿರುತ್ತದೆ" ಎಂದೆಲ್ಲಾ ಹೇಳಿದ. ಎಲಡಿಕೆ ಹಾಕಿ ಕೊಳ್ಳಿ ಎಂದು ಒತ್ತಾಯಪಡಿಸಿದ.

ಮದುವಣಿಗ ಆಗ ದನಿ ಕೂಡಿಸಿದ. ನಮ್ಮೂರಿನಲ್ಲಿ ಅದಕ್ಕೇ ಇರಬೇಕು ಬಾಳೆಲೇಲೆ ಊಟ ಪ್ರಶಸ್ತ ಎಂದು ಹೇಳೋದು ಎಂದ. ಅವ ನಂಜನಗೂಡಿನವ.

ಬ್ಯಾಂಕ್ ನೌಕರ. ತಂಜಾವೂರ್ ಕಡೆಯವ ಬೀಗರ ಅಳಿಯ. ಅವ ತಮಿಳು ತರಹ ಕನ್ನಡದಲ್ಲಿ ಅಂದ "ಅದಕ್ಕೇ ಹಸಿರು ತರಕಾರಿ ನಮ್ಮೂರಲ್ಲಿ ಬಲು ಬಳಕೆಯಲ್ಲಿದೆ. ನಮ್ಮ ಪೂರ್ವೀಕರಿಗೆ ಇದೆಲ್ಲಾ ಗೊತ್ತಿದ್ದಿರಬೇಕು. ಅದಕ್ಕೇ ಆ ಒಳ್ಳೆಯ ಅಭ್ಯಾಸಗಳನ್ನು ಮಾಡಿಸಿದರು" ಎಂದು—ತಂಜಾವೂರಿನಲ್ಲಿ ಎರಡೆಕರೆ ಜಮೀನ್ದಾರ ಆತ.

"ಅದಕ್ಕೇ ನನಗೆ ಹಸಿರು ಸೀರೆ ಕಂಡರೆ ಬಲು ಇಷ್ಟ" ಎಂದಂದಳು ತಂಜಾ ವೂರಿಗೆ ಕೊಟ್ಟ ಏನೂ ಅರಿಯದ ಹೆಣ್ಣು. ಕಷ್ಟದಿಂದ ಉಗುಳು ನುಂಗಿ ನಾನು ಸುಮ್ಮನಾದೆ.

ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿದರು. ಒಂದೆರಡು ನಿಮಿಷ ನಿಶ್ಶಬ್ದ.

ಆಮೇಲೆ ಎಲ್ಲರೂ ಒಂದೇ ಕೊರಲಿನಿಂದ ನನ್ನಮೇಲೆ ಬಿದ್ದರು. "ನೀವು ಹೆಣ್ಣಿನ ಕಡೆಯವರು. ಮದುವೆ ಏನೋ ಮುಗಿಯಿತು. ಈಗ ನಾವು ಕೊಟ್ಟ ಎಲಡಿಕೆಯನ್ನು ನೀವು ಹಾಕಿಕೊಳ್ಳಲೇಬೇಕು. ಅದು ದೇಹಾರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದು ಎಂಬುದನ್ನು ಖಚಿತಪಡಿಸಿದ್ದೇವೆ. ನಮ್ಮ ಪೂರ್ವೀಕರಿಗೆ ಈ ವಿಷಯ ತಿಳಿದಿತ್ತು. ಅದಕ್ಕೆ ಈ ಅಭ್ಯಾಸ ಮಾಡಿಸಿದರು ಎಂದೂ ನಿದರ್ಶಿಸಿದ್ದೇವೆ. ನೀವು ಎರಡು ಎಲೆಯನ್ನಾದರೂ ಅಗಿಯಲೇಬೇಕು" ಎಂದು.

ಗಂಡಿನೋರ ಪಾಳಯದಲ್ಲಿ ಆಗ್ಗ್ಯೆ ಹೆಣ್ಣಿನವನಾಗಿ ನಾನೊಬ್ಬನೇ ಸಿಕ್ಕಿಬಿದ್ದಿದ್ದೆ. ಎರಡೆಲೆ ಹಾಕಿಕೊಂಡು ಕಷ್ಟಪಟ್ಟೇಬಿಡೋಣ ಎನ್ನಿಸಿತು. ಆದರೆ ತಿರುಗಿ ದಂತವೈದ್ಯನ ಹತ್ತಿರ ಹೋಗಿ ಆ ಇಕ್ಕಳಗಳಿಂದ ಅಡಿಕೆ ಚೂರು ಹೊರಕ್ಕೆ ತೆಗೆಸಿಕೊಳ್ಳಬೇಕಾದರೆ ಬಲು ಯಾತನೆಯಲ್ಲಪ್ಪಾ ಎಂದು ಬುದ್ಧಿ ಹೇಳಿತು. 'ನನಗೆ ಎಲಡಿಕೆ ಅಭ್ಯಾಸವಿಲ್ಲ. ಅಲ್ಲದೆ ಹಲ್ಲಿನ ಕಟ್ಟಡ ಸ್ವಲ್ಪ ಸಡಿಲ. ದಯವಿಟ್ಟು ಜುಲುಂ ಮಾಡಬೇಡಿ' ಎಂದು ಗೋಗರದೆ. ಎಲ್ಲರೂ ಹಾಗೆನೇ ಪಾಪ! ಅಂತ ಸುಮ್ಮಗಾದರು. ಆದರೆ ಆ ಮರಿ ಡಾಕ್ಟರು ಸುಮ್ಮನಿರಬೇಕಲ್ಲಾ! ಅವ ಘುಡಾಯಿಸಿದ.

"ಹಾಗೆಲ್ಲಾ ಹೆದರಬೇಡಿ ರಾಯರೆ! ಎಲಡಿಕೆ ಹಾಕಿಕೊಂಡರೆ, ಎಲೆಯಲ್ಲಿರುವ ಕ್ಲೋರೋಫಿಲ್, ಅದು, ಹಲ್ಲುಸಂದಿಗಳಿಗೆಲ್ಲಾ ಹರಡಿ ಅಲ್ಲಿರುವ ವಿಷಕ್ರಿಮಿಗಳನ್ನು ಕೊಂದು, ವಸಡನ್ನು ಸಜೀವದಾರ್ಢ್ಯಮಾಡಿ ಮುಂದೆ ಎಲಡಿಕೆ ಅಗಿಯಲು ಸುಲಭವಾಗುವಂತೆ ಮಾಡುತ್ತದೆ. ಅಂದರೆ ಬಾಯಿ ಸುವಾಸನೆಯಾಗುತ್ತದೆ. ಕರುಳೆಲ್ಲಾ ಸುಖಮಯವಾಗುತ್ತದೆ. ಕಡೆಗೆ ಮೈ ಬೆವರು ಕೂಡ ಬೆವರು ವಾಸನೆಯಂತಿರುವುದಿಲ್ಲ." ಎಂದೆಲ್ಲಾ ಹೇಳಿ ಎಲಡಿಕೆ ಮಡಿಸಿಕೊಡುಕ್ಕೆ ಬಂದ. ಒಂದು ಗೋಟಡಿಕೆಗೆ ಸುಣ್ಣ ಬಳಿದು ಒಂದು ಮೊರದಗಲದ ಕಪ್ಪಂ ಕಪ್ಪು ವಿಳ್ಳೇದೆಲೆಯಲ್ಲಿ ಮಡಿಸಿ ಹಾಕೊಳ್ಳಿ ಎಂದು ಬಾಯಿಗೆ ತುರುಕುಕ್ಕೇ ಬಂದ. ಗಂಡು ಕೈ ಗಂಡು ಬಾಯಿಗೆ ಈ ರೀತಿ ಬೀಡಾ ತುರುಕೋದು ನನಗೆ ಬಲು ಕೋಪ ಬರಿಸಿತು.

"ಬೇಡ್ರೀ ಬೇಡ್ರೀ" ಅಂದೆ, ಗಂಡಿನವರು ಅವರು ಅನ್ನೋದನ್ನೂ ಮರೆತು.

ಇಲ್ಲಾ ರಾಯರೇ! ಅಂತ ತಿರುಗಿ ಶುರು ಹಚ್ಚಿದ. ನನಗೆ ರೇಗಿತು.

"ಎಂತಹ ವೈದ್ಯನಯ್ಯಾ! ನೀನು ? ಯಾರೋ ಬರೆದರು ಹಸಿರಿನ ಕ್ಲೋರೋಫಿಲ್ ದುರ್ವಾಸನೆಯನ್ನು ಪರಿಹರಿಸುತ್ತೆ—ಕೆಟ್ಟ ಕ್ರಿಮಿಗಳನ್ನು ನಾಶಮಾಡುತ್ತೆ ಅಂತ. ಅದನ್ನೇ ದಿಟ ಅಂತ ನಂಬುತ್ತೀಯಲ್ಲಾ. ಎದುರಿಗೇ ನೋಡು ನಿದರ್ಶನ,

ಹಸಿರು ಚೇಪೇಕಾಯನ್ನೇ ತಿನ್ನುತ್ತಾ ಹೋಗ್ತಿದ್ದಾನೆ ಚಿರಂಜೀವಿ. ಇಂತಿಂತಹ ಕಡೆಯೆಲ್ಲಾ ಓಡಾಡಿದೆ ಮಗು ಎಂದು ಹೇಳುವುದಕ್ಕೆ ಬೇಟೆನಾಯೇನೂ ಬೇಡ ಅಲ್ಲವೆ? ನಮಗೂ ಅರ್ಥವಾಗುತ್ತೆ ಅಲ್ಲವೇ?

ಅಳಿಯಂದರ ಬಾಯಿ ನೋಡಯ್ಯಾ! ಬಾಳೆಲೇಲೆ ಊಟಮಾಡಿದ ಬಾಯಿ ಅದು. ಬಾಳೆಲೆ ಸೋಂಕು ಹಲ್ಲಿಗೆಲ್ಲಾ ಕಪ್ಪಿಟ್ಟಂತಿದೆ.

ತಂಜಾವೂರ ಭಾವ, ಹಸಿರು ತರಕಾರಿ ತಿಂದ ಭಾವನನ್ನು ನೋಡಪ್ಪಾ! ಹೊಟ್ಟೆ ಕೂಗೋದು ಇಲ್ಲಿಗೆ ಕೇಳಿಸುತ್ತೆ ಬರೀ ಹಸಿರು ಮೆಣಸಿನಕಾಯನ್ನೇ ತಿನ್ನೋ ನಮ್ಮ ತೆಲುಗು ಪುರೋಹಿತರನ್ನು ನೋಡು. ಬೇಡ! ಅವರನ್ನು ನೋಡುವುದು ಬೇಡ. ಅವರ ಧೋತ್ರ ಒಗೆದು ಒಣಗಿ ಹಾಕಿದ್ದಾರೆ. ನೋಡಲ್ಲಿ ಈಗಲೂ ಬೆವರಿನ ಗಬರುನಾತ. ಇಷ್ಟು ನಿದರ್ಶನ ಎದುರಿಗೇ ಇರೋವಾಗ ಯಾರೋ ಹೇಳಿದರು ಕ್ಲೋರೋಫಿಲ್ಲು ಅಂತ. ನೀನೂ ವೈಜ್ಞಾನಿಕ ನಂಬಿದೆ. ನಂಬಿಕೋ ಆದರೆ ನನ್ನನ್ನೇಕೆ ಸತಾಯಿಸ್ತೀಪ್ಪ "ಹೆಣ್ಣಿನ ಕಡೆಯ ನಿಸ್ಸಹಾಯಕನನ್ನ" ಎಂದೆ.

ಗಂಡಿನ ಕಡೆಯವರೆಲ್ಲಾ ಕೇಕೇ ಹಾಕಿ ನಗಲು ಪ್ರಾರಂಭಿಸಿದರು. ತಾನೊಬ್ಬನೇ ಓದಿದವನು ಆ ಮನೆಯಲ್ಲಿ. ಎಂದು ಎಲ್ಲರನ್ನೂ ಸತಾಯಿಸುತ್ತಿದ್ದಾ ಅಂತ ಕಾಣಿಸುತ್ತೆ. ನಾನು ಸ್ವಲ್ಪ ಮೇಲೆ ಬಿದ್ದಾಗ ಅವನ ಚಿಗುರುಮೀಶೆ ಕೆಮ್ಮಣ್ಣಿನಲ್ಲಿ ಬಿದ್ದಂತಾದಾಗ, ಎಲ್ಲರೂ ಬೊಬ್ಬೆಹಾಕಿ ನಕ್ಕರು.

ಚಿರಂಜೀವಿ, ಚೇಪೇಕಾಯಿನ ಚಿರಂಜೀವಿ, ತಿರುಗಿ ತಂಜಾವೂರು ಭಾವನ ಹತ್ತಿರ ಬಂದು "ಅಪ್ಪಾ ನಂಗೂ ವೆತ್ತಲೆ ಕುಡು" ಎಂದು ಹೇಳಿದ.

ಮುಂದಿನ ಏರ್ಪಾಡು ಮಾಡಬೇಕು ಹೋಗಿ ಬರ್ತೇನೆ ಅಂತ ನಾನು ಎದ್ದು ಹೊರಟೆ.

—ಕುಮಾರ್.

ದಫೇದಾರ್ ದೇರಣ್ಣೋರು

ಬಿಕ್ಕೋಚಿ—ತುಕ್ಕೋಚಿ

ವಿಪರೀತ ಬೇಜಾರು. ಹಾಳು ಆಫೀಸಿಗೆ ರಜವಾದರೂ ಏತಕ್ಕೆ ಬರುತ್ತೋ ಅನ್ನಿಸುತ್ತೆ. ಏನುಮಾಡಲೂ ತೋಚದು—ಎಲ್ಲಿಗೆ ಹೋಗಲೂ ತೋಚದು. ಮನೆಯಲ್ಲೋ ಬಿಕೋ ಬಿಕೋ. ಮೀನಾಕ್ಷಿ ಮಕ್ಕಳೊಡಗೂಡಿ ತವರು ಮನೆಗೆ ಹೋಗಿದ್ದಾಳೆ. ಮಡದಿ ಮಕ್ಕಳು ಎಲ್ಲಾ ಇದ್ದಾಗ ಇದೇನು ಮನೆ—ಇದೇನು ತಾಪತ್ರಯ ಎಂದು ಮನೆಗೆ ಬರಲೇ ಬೇಸರವಾಗುವುದು. ಈಗ ಮನೆಯಲ್ಲಿ ಮಿಕ ಮಿಕಾಂತ ಏಕಾಂಗಿಯಾಗಿ ಕೂತಾಗ ಆ ಮಕ್ಕಳ ಅಳು—ಮಡದಿಯ ಗೊಣಗು—ಸಹಸ್ರ ತಾಪತ್ರಯದಲ್ಲಿ ಏನೊಂದು ಸೊಗಸಿರುತ್ತಿತ್ತು!! ಅನ್ನುವುದು ಅರ್ಥವಾಗುತ್ತಿತ್ತು. ಆಫೀಸಿದ್ದಿದ್ದರೆ ಅಲ್ಲಿನ ಕುಕ್ಕುವ ಆಫೀಸರು—ಕಾಡುವ ಕಕ್ಷಿಗಾರರು ಇರುವ ಮಾಮೂಲಿನಲ್ಲಿ ಏನೊಂದು ಸುಖ!! ಇವತ್ತು ಅದೊಂದೂ ಇಲ್ಲವಾಗಿರುವುದು ಅತಿ ಬೇಸರಕ್ಕಿಟ್ಟಿತ್ತು.

ಹೆಗಲಿಗೆ ಟೌಲು ಏರಿಸಿ ಮನೆಗೆ ಬೀಗಹಾಕಿ ಹೊರಟೆ. ಎಲ್ಲಿಗೆ ಹೋಗಲಿ?.... ಪೇಟೆಕಡೆ ಹೋಗೋಣವೆಂದರೆ ಆ ಸೆಟ್ಟಿ ಅಂಗಡಿ ಮುಂದೇ ಹೋಗಬೇಕು—ಅವನ ಬಾಕಿ ನಿಂತು ಮೂರು ತಿಂಗಳಾಯಿತು—ಆ ಕಡೆ ಸುಳಿಯೋಹಾಗಿಲ್ಲ. ವೆಂಕಟಾಚಲನ ಮನೆಗೆ ಹೋಗೋಣವೆಂದರೆ ಅವನ ಮಾತು ಭೈರಿಗೆ ಹಿಡಿದಹಾಗೆ ಮತ್ತು ತನ್ನ ಮದುವೆ ತನ್ನ ಮಾವ, ತನ್ನ ಮಡದಿ, ತನ್ನ ಮಕ್ಕಳ ವಿವಿಧ ವರ್ಣನೆ ಕೇಳುವ ಬದಲು ಭಾವಿ ಹಾರುವುದರಲ್ಲೇ ಸೊಗಸು ಹೆಚ್ಚು. ಅತ್ತ ದರಿ ಇತ್ತ ಪುಲಿ ಎತ್ತ ಪೋಗಲಿ ಶಿವನೇ ಎನ್ನುವಂತಾಯ್ತು. ಏನೊಂದೂ ತೋಚದೇ ಮೂಲೆ ಹೋಟಲಿಗೆ ಹೋದೆ. ಮಾಮೂಲಿನ ನನ್ನ ಸ್ಥಳಕ್ಕೆ ಹೋದಾಗ ಅಲ್ಲಿಯೇ ಮಂಡಿಸಿದ್ದರು ಶ್ರೀಮಾನ್ ದಫೇದಾರ್ ದೇರಣ್ಣೋರು.

ತದೇಕಚಿತ್ತರಾಗಿ—ತದೇಕಭಾವರಾಗಿ ತಸ್ಮೈ ಶ್ರೀ ಗುರುವೇ ನಮಃ ಎನ್ನುವ ಸಮಾಧಿಗ್ರಸ್ಥರಂತೆ ಕಂಡರು ದೇರಣ್ಣೋರು. ಅರೆಮುಚ್ಚಿದ ಕಣ್ಣು—ನವಿರಾಗಿ—ಹದವಾಗಿ ಆಡಿಸುತ್ತಿದ್ದ ಅವರ ಬಾಯಿ—ಫಳಫಳನೆ ಹೊಳೆಯುವ ಆ ಬೆಳ್ಳಿ ಗುಂಡಿಗಳು, ಬಲವಾಗಿ ಬಿಗಿದ ಬೆಲ್ಟನ್ನು ಬಿಚ್ಚಿ ಹೆಗಲಿಗೇರಿಸಿದ್ದರು. ಅವರ ಆಗಿನ ಭಂಗಿ, ಪರಂಧಾಮಕ್ಕೆ ಪ್ರಯತ್ನಿಸುವ ಪರಶಿವನ ಪರಮಭಕ್ತರಂತೆ ಇತ್ತು. ಇದೇನು

ಈ ಕಳೆ ಈ ದಿನ ಎಂದು ಸೂಕ್ಷ್ಮವಾಗಿ ಅವಲೋಕಿಸಿದಾಗ ಅವರೆದುರು ಪಕೋಡದ ತಟ್ಟೆಯಿತ್ತು, ಪಕ್ಕದಲ್ಲಿ ತಿಳಿಯ ಹಾಲಿನ ಲೋಟವಿತ್ತು. ಅಷ್ಟು ತನ್ಮಯತೆ ಅಷ್ಟು ಶ್ರದ್ಧೆ ನಮ್ಮ ದ|| ದೇರಣ್ಣೋರಿಗೆ ಆ ಪಕೋಡದಲ್ಲಿ. ಪರಮಾತ್ಮ ಯಾರಿಗೆ ಯಾವು ದರಲ್ಲಿ ಕೈವಲ್ಯ ಕಾಣಿಸುತ್ತಾನೋ ಯಾರು ಬಲ್ಲರು? ಭೂಪತಿ ಪೂರ್ತ ತಟ್ಟೆಯಲ್ಲಿನ ಪಕೋಡವನ್ನೆಲ್ಲಾ ಮುಗಿಸಿ, ನೀರು ಕುಡಿದು, ತಿಳಿ ಹಾಲು ಒಂದು ಗುಟುಕು ಗುಟುಕರಿಸುತ್ತಿರುವಾಗಲೇ ನಾನು ಬಂದದ್ದು ಅವರ ಗಮನಕ್ಕೆ ಬಂತು.

"ಓಹೊಹೊಹೊ—ಬನ್ನಿ ಬನ್ನಿ-ನಾನು ನೋಡಲೇ ಇಲ್ಲ...." ಎಂದೆನ್ನುತ್ತಾ ಪಕ್ಕದ ಕುರ್ಚಿ ತೋರಿಸಿದರು. ನಾನು ಕುಕ್ಕರಿಸಿದೆ. ನನಗೂ ಒಂದು ಪಕೋಡ ಹೇಳಿದರು—ನಾನು ಬೇಡವೆಂದು ಸಂಕೋಚಪಟ್ಟುಕೊಂಡೇ ತಿಂದು ಮುಗಿಸಿದೆ. ನನ್ನ ತಿನ್ನುವಿಕೆ ಮುಗಿಯುವ ಮುಂಚೆಯೇ ಅವರು ತೇಗಿ ಎದ್ದಿದ್ದರು—ಮಾಲೀಕನ ಮೇಜಿನ ಪಕ್ಕದಲ್ಲಿನ ಗೋಡೆಗಿದ್ದ ದೊಡ್ಡ ಕನ್ನಡಿಯಲ್ಲಿ ನೋಡಿಕೊಳ್ಳುತ್ತಾ ಬೆಲ್ಟ ಬಿಗಿಯುತ್ತಿದ್ದರು. ಅಂದಮೇಲೆ ಅವರು ತಿಂದ ಬಿಲ್ಲನ್ನೂ ಸೇರಿಸಿ ಮಾಣಿ ನನಗೆ ಬಿಲ್ಲು ಕೊಟ್ಟಿದ್ದನೆಂದು ಬಿಡಿಸಿ ಹೇಳಬೇಕೆ?—ಹೂಂ, ಇನ್ನೇನು ಮಾಡುವುದು ರಜಾದಿನವನ್ನು ಬೇಜಾರಿಲ್ಲದೆ ಕಳೆಯಬೇಕಾದ್ದಕ್ಕೆ ನಾನು ತೆತ್ತ ಎಂಟರ್‌ಟೇನ್ ಮೆಂಟ್ ಟ್ಯಾಕ್ಸೆಂದು ತಿಳಿದು ಹಣ ತೆತ್ತು ಹೊರಬಿದ್ದೆ. ದ|| ದೇರಣ್ಣನವರು ನನ ಗಾಗಿ ಹೊರಗೆ ಕಾದಿದ್ದರು. ಬಂದವರೇ ನನ್ನ ಹೆಗಲಮೇಲೆ ಕೈಹಾಕಿ "ಆಫೀಸಿ ಲ್ಲದ್ದು ಬಹು ಬೇಜಾರು—ಒಂದು ಬೇವರ್ಸಿ ಹೆಣವಾದರೂ ಸಿಕ್ಕಿದ್ದರೆ ಬೇಜಾರು ಕಳಿತಿತ್ತು...." ಎಂದು ಆಕಳಿಸಿದರು. "ಯಾಕೆ ಮನೆಯಲ್ಲೂ ಬೇಸರವೇ?...." ಎಂದೆ. ದುಃಖ ಇಸಮುನ್ನು ಆವರಿಸಿತು—ಕಣ್ಣಲ್ಲಿ ನೀರು ಬರುವುದೊಂದು ಬಾಕಿ—ಗದ್ಗ ಸ್ವರದಲ್ಲಿ "ಸಾವಂತ್ರಿ ತವರುಮನೆಗೆ ಹೋಗಿದ್ದಾಳೆ" ಎಂದರು. ಅವರ ಆಗಿನ ಸ್ಥಿತಿ ಎಂಥ ಕಠಿಣ ಹೃದಯರನ್ನೂ ಕರಗಿಸಿಬಿಡುತ್ತಿತ್ತು. ಅವರ ಸ್ಥಿತಿಯಲ್ಲೇ ನಾನೂ ಇರುವೆನೆಂದು ತಿಳಿಸಲು "ಇಬ್ಬರೂ ಒಂದೇ ದೋಣಿಯಲ್ಲಿ ಸಾಗುತ್ತಿದ್ದೇವೆ ದಫೇದಾರ್ರೇ, ಮೀನಾಕ್ಷಿಯೂ ತವರೂರಿಗೆ ಹೋಗಿದ್ದಾಳೆ...." ಎಂದು ಹಸುಮುಖ ದಿಂದ ಹೇಳಿದೆ. ಅವರಂತೆ ನಾನೂ ಪೇಚಾಡುವಸ್ಥಿತಿಯಲ್ಲೇ ಇರುವೆನೆಂದೂ ಆದರೂ ಅದಕ್ಕಾಗಿ ದುಃಖಪಡುವ ಹೆಂಡತಿಹುಚ್ಚ ನಾನಲ್ಲವೆಂದು ಸೂಕ್ಷ್ಮವಾಗಿ ಹೇಳಿದೆ. "ಇಬ್ಬರೂ ಒಂದೇ ಕಚೇರಿ—ಇಬ್ಬರಿಗೂ ಇವತ್ತು ರಜ—ಇಬ್ಬರ ಕುಟುಂಬವೂ ಒಂದೇಬಾರಿ ಊರಿನಲ್ಲಿ—ಎಂತಹ ಸಮತಾ ತಾಪತ್ರಿಗಳು ನಾವು" ಎಂದು ಒಬ್ಬರಿಗೊಬ್ಬರು ಹೇಗೆ ಒಂದೇ ತರಹ ಸಂಕಟದಲ್ಲಿದ್ದೇವೆಂದು ತಿಳಿಸಿದೆ. ಹೀಗೆ ಮಾತಾಡುತ್ತಿರುವಂತೆಯೇ ದಫೆದಾರರ ಮನೆಯ ಬಳಿಯೇ ಬಂದಿದ್ದೆವು. ಬೀಗ ತೆಗೆದು ನಡುಮನೆಯಲ್ಲಿ ಕುಳಿತಾಗ ಆಗಲೆ ಹತ್ತು ಘಂಟೆಯಾಗಿತ್ತು. ಬೆಲ್ಟು ಬಿಚ್ಚಿ ಬೂಡ್ಸು ತೆಗೆದು ಪೇಟ ಇಳಿಸಿ ಮೈಭಾರ ಇಳಿದಂತಾಗಿ ಹಾಸಿಗೆಗೆ ತಲೆ ಇಟ್ಟು ಚಾಪೆ

ಮೇಲೆ ಆರಾಮವಾಗಿ ಕಾಲುಚಾಚಿದರು. ಆಳವಾಗಿ ಸೂರುನೋಡಿ ಹುಬ್ಬು ಗಂಟಿಕ್ಕಿದರು. ಅದೇ ರಸಮಯ ಯಾವುದೋ ಸ್ವಾರಸ್ಯವಾದ ಕಥೆಹೊರಬೀಳುವುದೆಂದು ಚಾತಕ ಪಕ್ಷಿಯಂತೆ ಕಾದುಕುಳಿತಿದ್ದ ಬಾಯಿ ತೆಗೆದು....

"ಬಿಕ್ಕೋಜಿ—ತುಕ್ಕೋಜಿ ಹೀಗೇ ಇದ್ದರು ನೋಡಿ. ಗಳಸ್ಯ ಕಂಠಸ್ಯ ಮಹರಾಯರು ಇಬ್ಬರಪ್ರಾಣವೂ ಒಂದೇ ಕುತ್ತಿಗೇಲಿ ಇತ್ತು" ಎಂದು ಕಣ್ಣು ಮುಚ್ಚಿಕೊಂಡೇ ಹೇಳಿದರು. ಇದಕ್ಕೆ ಕಾದಿದ್ದ ನಾನು "ಯಾವ ಊರಲ್ಲಿ ಅವರಿದ್ದದ್ದೂ" ಎಂದು ರಾಗ ಎಳೆದೆ.

"ಸನ್ ಸಾವಿರದ ಹತ್ತೊಂಬತ್ತು ನೂರಾಐವತ್ತರಲ್ಲೂ ಅವರಿದ್ದರು—ಆದರೆ ಈಗ ಮುಕ್ಕಾಲುಪಾಲು ಸೆಂಟ್ರಲ್ ಜೈಲಲ್ಲಿ ಇರಬಹುದು...."

"ಅರೆ! ಕಳ್ಳಬಡ್ಡೀ ಮಕ್ಕಳೇನು ಅವರು"

"ಅಲ್ಲದೆ ಕುಡುಕ ಬಡ್ಡೀಮಕ್ಕಳು.... ಇಬ್ಬರಲ್ಲೂ ಎಂಥಾ ಸ್ನೇಹಾಂದ್ರೆ-ವಿಚಿತ್ರ ಹೊಂದಾಣಿಕೆ ಅವರದ್ದು. ಇಬ್ಬರೂ ಒಂದೇ ಪ್ಯಾಕಿನಲ್ಲಿ ಇಸ್ಪೇಟು ಆಡುತ್ತಿದ್ದರು—ರಾಣಿಸಾಲು ಮೂರೆಲೆ ಆಟವೆಂದರೆ ಅವರಿಗೆ ಪಂಚಪ್ರಾಣ—ಒಂದೇ ಮನೆಯಲ್ಲಿ ಎರಡು ಭಾಗಮಾಡಿಕೊಂಡಿದ್ದರು—ಎಂಥಾ ಮನೆ! ಇಬ್ಬರಿಂದ ಒಂದೇ ಬಚ್ಚಲು—ಒಂದೇ ಹಾಲು—ಒಂದೇ ರೂಮು ಒಂದೇ ಅಡಿಗೆ ಮನೆ .."

"ಹ್ಹ ಹ್ಹ ಹ್ಹ.... ಚೆನ್ನಾಗಿದೆ ಅಂದ ಮೇಲೆ ಒಂದೇ ಮನೇ ಅನ್ನಿ ಅದರಲ್ಲಿ ಎರಡು ಭಾಗವೇನು ಬಂತು...."

"ಮನೆ ಒಂದಾದರೂ ಒಂದೊಂದು ರೂಮಲ್ಲೂ ಮಧ್ಯೆ ಗೀರೆಳದು ಭಾಗ ಮಾಡಿಕೊಂಡಿದ್ದರು. ಇಬ್ಬರೂ ದೂರದ ದೊಡ್ಡಚಿಕ್ಕಪ್ಪ ಮಕ್ಕಳು ಒಂದೇ ಕಸುಬು...."

"ಏನು ಕಸುಬು?...."

"ಕನ್ನ ಹಾಕೋದು—ತಿಳಿದವರು ಇವರು ಕನ್ನೋಜಿ ಶಿಷ್ಯಂದಿರೂಂತ ಅನ್ನುವರು—ಇದ್ದರೂ ಇರಬಹುದೂನ್ನಿ—ನಮ್ಮ ಪೋಲೀಸಿನವರಿಗೆ ಇದು ಗೊತ್ತಿಲ್ಲಾಂತ ಅಲ್ಲ—ಆ ನನ್ನ ಮಕ್ಕಳೂ ಇದಕ್ಕೆ ಶಾಮೀಲೇನ್ನಿ. ಬಹು ಕೆಟ್ಟದು ಈ ಕಾಂಚಾಣ ಎಂಜಲು ಕಾಸಿಗೆ ಕೈ ಒಡ್ಡಿದ ನಮ್ಮ ಕಾನ್ಸ್ಟೆಬಲ್ಲುಗಳು ಬಿಕ್ಕೋಜಿ,—ತುಕ್ಕೋಜಿಗಳನ್ನು ಕೈಗೆಸಿಕ್ಕರೂ ನುಣಚಿಕೊಂಡು ಹೋಗುವಂತೆ ಮಾಡುತ್ತಿದ್ದರು. ಇದರಿಂದ ನೋಡಿದ ಜನ ಅವರ ಸಾಹಸ ಚಾಕ ಚಕ್ಯತೆಗೆ ಹೆಚ್ಚು ಗಮನ ಕೊಟ್ಟರಲ್ಲದೆ, ಅದಕ್ಕೆ ಮುಖ್ಯಕಾರಣರಾದ ನಮ್ಮ ಪೋಲೀಸರನ್ನು ಕೇಳುವವರೇ ಇಲ್ಲ....."

"ಹೂಂ ಸರಿ....ಚೆನ್ನಾಗಿದೆ ಆಮೇಲೆ"

"ಇದರಲ್ಲಿ ಇನ್ನೊಂದು ಐತಿಹ್ಯವಿದೇನ್ನಿ—ಮಾಮೂಲಾಗಿ ಫುಟ್‌ಪಾತ್ ಮೇಲೆ ನಡೀದೆ ಇದ್ದವರು, ಗಾಡಿ ಬಲಕ್ಕೆ ಹೊಡೆದವರು– ದೀಪವಿಲ್ಲದೆ ಸೈಕಲ್ ನಡಿಸಿದ ಪಾಪಿ ಪರದೇಶಿಗಳನ್ನೆ ಹಿಡಿಯುತ್ತಿದ್ದರೆ ನಮ್ಮವರಿಗೂ ಶಹಬ್ಬಾಸ್‌ಗಿರಿ ಇರೋಲ್ಲ—ಭಡ್ತಿ ಇರೋಲ್ಲ. ಅದಕ್ಕೆ ಬಿಕ್ಕೋಜಿ—ತುಕ್ಕೋಜಿಗಳಂಥ ಕದೀಮರನ್ನ ಹಿಡಿದರೆ ದಫೆದಾರ್ರಿದ್ದೋನು ಸಬ್‌ಇನ್ಸ್‌ಪೆಕ್ಟರಾಗುತ್ತಾನೆ. ಊರಲ್ಲಿ ಸುದ್ದಿ ಹರಡಿ ಸೋದು –ತುಕ್ಕೋಜಿ– ಬಿಕ್ಕೋಜಿ ಬಂದರು. ಅಲ್ಲಿದ್ದರು, ಕೈಗೆಸಿಕ್ಕರು ಮತ್ತೆ ಮಂಗಳಮಾಯ—ಸಾಹುಕಾರ್ರ ಮನೇಲು ಸಾವಿರ ತೊಲ ಬಂಗಾರದ ಕಳವುಮಾಲು ಸಮೇತ ಬಿಕ್ಕೋಜಿ ಸಿಕ್ಕ, ಅವತ್ತೆ ರಾತ್ರಿ ತುಕ್ಕೋಜಿ ಬಂದು ಬಿಕ್ಕೋಜಿಯನ್ನೂ ಬಂಗಾರ ಸಮೇತ ಹಾರಿಸಿಕೊಂಡು ಹೋದ... ಇತ್ಯಾದಿ ರೋಮಾಂಚಕಾರಿ ಸುದ್ದಿ ಹೆರಡಿಸುವುದು. ಅನಂತರ ಸಾಹಸದಿಂದ ಇಬ್ಬರನ್ನೂ ಹಿಡಿದರೆ ನಮ್ಮ ಕಸುಬಿಗೇ ಕಳಶಪ್ರಾಯ...." ಎಂದು ಹೇಳಿ ಕಣ್ಣು ಮುಚ್ಚಿದರು. ನಿದ್ರೆ ಬರುವುದು ಎಂದು ಹೇಳಿಬಿಟ್ಟರು. ನನಗೆ ಎದೆ ಹೊಡೆಯಿತು. ತುಕ್ಕೋಜಿ—ಬಿಕ್ಕೋಜಿಯರ ಕಥೆ ಪೂರ್ತಿ ಹೇಳದಿದ್ದರೆ ಹೇಗೆ!–"ದೇರಣ್ಣೋರೆ, ದಯಮಾಡಿ ಕಥೆ ಹೇಳಿ ನಂತರ ನಿದ್ರೆ ಮಾಡಿ" ಎಂದು ಅಂಗಲಾಚಿದೆ.

"ಹಾಳಾದ್ದು ಎದುರಿಗೆ ಪಕೋಡದ ಪೊಟ್ಟಣವಿಲ್ಲದಿದ್ದರೆ ಹೇಳುಕ್ಕೆ ಸ್ಫೂರ್ತಿಯೇ ಬರೋಲ್ಲ...." ಎಂದು ಆಕಳಿಸಿದರು. ನಾನು ವಾಯುವೇಗದಲ್ಲಿ ಹೊರಬಿದ್ದು ಮೂಲೆ ಹೋಟಲಿಂದ ಒಂದು ಸೇರು ಪಕೋಡ ಕಟ್ಟಿಸಿಕೊಂಡುಬಂದೆ. ಮಹರಾಯ ನಾನು ಬರುವವೇಳೆಗೆ ಸಜ್ಜಾಗಿ ಎದ್ದು ಕೂತಿದ್ದು ತಿನ್ನಲು ತಯಾರಾಗಿದ್ದರು.

"ಕುಡಿಯೋದೊಂದು ಈ ತುಕ್ಕ—ಬಿಕ್ಕರಿಗೆ ಇಲ್ಲದಿದ್ದರೆ ಆಸಾಮಿಗಳು ತಸ್ಕರರಲ್ಲಿ ಅಪರಂಜಿಗಳಾಗುತ್ತಿದ್ದರು. ಒಂದು ಬುರುಡೆ ಎಂಡಕ್ಕೆ, ಮಾಡಿದ ಕಳ್ಳತನದ ಗುಟ್ಟೆಲ್ಲಾ ಹೇಳಿ ಕೇಸು ಸುಸೂತ್ರ ನಡಿಯೋಹಂಗೆ ಮಾಡಿಕೊಡ್ತಿದ್ರು."

"ಯಾವ ಊರು ಕಡೆಯವರು ಇವರು?"

"ಶಿವನೇ ಬಲ್ಲ---ನಾನು ಬಾಗೂರಿನಲ್ಲಿದ್ದಾಗ ಇವರುಗಳ ವಂಶಸ್ಥರು ಬಾಗೂರು ಹೋಬಳಿ ನೀರುಗುಂದಗ್ರಾಮದ ಕಡೆಯವರು ಎಂದು ಬಿಕ್ಕೋಜಿಯೇ ನನ್ನ ಕೈಗೊಮ್ಮೆ ಸಿಕ್ಕಾಗ ಬಾಯಿಬಿಟ್ಟಿದ್ದ. ಹುಕ್ಕಬುಕ್ಕರು ವಿಜಯನಗರ ಸ್ಥಾಪಿಸಿದರೂಂತ ಕೇಳಿ ಬಲ್ಲರಲ್ಲವೆ? ಹಾಗೆ ಈ ತುಕ್ಕಬಿಕ್ಕರು ಆ ಪ್ರಾಂತದಲ್ಲಿ ತಮ್ಮದೇ ಪ್ರಭಾವವಿರುವ ತಸ್ಕರ ರಾಜ್ಯ ಸ್ಥಾಪಿಸಬೇಕೆಂದು ನಿರ್ಧರಿಸಿದ್ದರು. ಆದರೆ ಅವರ ಮಧ್ಯದ

ಮೋಹ ಅವರನ್ನು ಸೆಂಟ್ರಲ್ ಜೈಲು ಕಾಣಿಸಿತು. ಈ ಪಾಟಿ ಕುಡಿಯುವುದಕ್ಕೆ ಅವರಲ್ಲಿ ತಲೆದೂರಿದ ವೈಮನಸ್ಯವೇ ಕಾರಣ"

"ಇಬ್ಬರೂ ಒಬ್ಬರಿಗೊಬ್ಬರು ಕಿತ್ತಾಡಿದರೇನು?"

"ಜಗಳಗಳೆಲ್ಲಾ ಬರೋದು ಈ ಹೆಂಗಸರಿಂದಲೇ – ತುಕ್ಕೋಜಿಯ ಸಾಹಸಕ್ಕೆ ಮರುಳಾದವಳು ಮಾ ಲಕ್ಷ್ಮಿ ಅವನಿಗೆ ಮಾಲೆ ಹಾಕಬೇಕು ಅಂತ ನಿರ್ಧರಿಸಿ ಅವನ ಜೊತೆಗೆ ಸ್ನೇಹವಾಗಿದ್ದಳು. ಬಿಕ್ಕೋಜಿಯೂ ಧೀರನೆ ಅಂದ ಮೇಲೆ ಅವನ ಸಾಹಸಕ್ಕೂ ಮರುಳಾಗುವ ಮಾನಿನಿ ಬೇಕಷ್ಟೆ— ಸಿಕ್ಕಳು ಅವನಿಗೂ ಒಬ್ಬಳು. ಕಡೆಗೊಮ್ಮೆ ತುಕ್ಕೋಜಿ ಬಿಕ್ಕೋಜಿಗಳ ಗೆಳತಿ ಒಬ್ಬಳೇ ಮಾಲಕ್ಷ್ಮಿ ಅಂತ ತಿಳಿದಾಗಲೇ ಇವರ ಗಳಸ್ಯ ಕಂಠಸ್ಯಕ್ಕೆ ಊನ ಬಂದು ಅವಳನ್ನು ಜೊತೆಗೆ ಕರೆದುಕೊಂಡು ಜೈಲು ಸೇರಿದರು"

"ಅರೆ! ಅವಳೇಕೆ ಜೈಲಿಗೆ ಹೋದಳು!"

"ಇಬ್ಬರು ಕದ್ದ ಬಂಗಾರವೂ ಪತ್ತೆ ಆದದ್ದು ಅವಳ ಮೈಮೇಲಿದ್ದ ಒಡವೆಗಳಿಂದಲೆ. ಇವ ಕುಡಿದು ಅವನ ಮೇಲೆ ಹೇಳಿದ ಅವ ಕುಡಿದು ಇವನ ಮೇಲೆ ಹೇಳಿದ, ಮಾ ಲಕ್ಷ್ಮಿ ಕುಡಿದು ಇಬ್ಬರ ಮೇಲೂ ಹೇಳಿದಳು— ಅಂದ ಮೇಲೆ ಕೇಸು ವಿಚಾರಣೆಗೆ ಎಷ್ಟು ಸುಲಭಸಾಯ್ತು ನೋಡಿ. ಚಿತ್ರಕಲ್‌ದುರ್ಗದ ಡಿಸ್ಟ್ರಿಕಟ್‌ನ ಪಾನನಿರೋಧದಿಂದ ಇವರು ಕುಡಿದ ಕಳ್ಳನಿಂದ ಕುಡಿದವರೆಂದು ನಾವು ಹಿಡಿದು ಹಾಕಿದೆವು— ಬರೀ ಕುಡುಕ ನಾನು ತುಕ್ಕೋಜಿ ಜೊತೆಗೆ ಕಳ್ಳನೂ ಹೌದು ಎಂದು ಬಿಕ್ಕೋಜಿ ಹೇಳಿದ. ಇವನ ಗುಟ್ಟನ್ನು ತುಕ್ಕೋಜಿ ಬಯಲುಮಾಡಿದ. ಒಟ್ಟಿನಲ್ಲಿ ಯಾಕೆ ಹೇಳೋಕೆ ಬಂದೆ ಅಂದರೆ ಹೆಂಗಸರಿಂದಲೇ ಈ ಕಳ್ಳರು ಹೊರಬಿದ್ದದ್ದು. ಈಗ ನೀವೆ ತೊಗೊಳ್ಳಿ ನಿಮ್ಮ ಹೆಂಗಸರು ಮೀನಾಕ್ಷಮ್ಮ ಇಲ್ಲದ್ದರಿಂದ ನೀವು ಹೊರೆ ಬಿದ್ದು ನನ್ನ ಮನೆಗೆ ಬಂದಿರಿ— ನನ್ನ ಸಾವಂತ್ರಿ ಊರಲಿಲ್ಲಾಂತ ನಾನೂ ಮಾ ಲಕ್ಷ್ಮಿ ಕಥೆ ಹೇಳಿದೆ— ಒಟ್ಟಿನಲ್ಲಿ ಹೆಂಗನರಿಂದಾನೇ ನಮ್ಮ ಕಳ್ಳತನಗಳು ಹೊರ ಬೀಳೋದು...." ಎಂದು ಹೇಳಿ ಮತ್ತೆ ಆಕಳಿಸಿದರು. ಅವರ ಮಾತೇ ನನಗೆ ಅರ್ಥವಾಗಲಿಲ್ಲ. ನಾವು ಕಳ್ಳರೇ ಎಂದು ಸಂದೇಹ ಬಂತು. ಇರಬಹುದೇನೊ ಮೀನಾಕ್ಷಿಗೆ ಬರೆದು ತಿಳಿದುಕೊಳ್ಳುವ ಎಂದುಕೊಂಡೆ. ಅರ್ಧ ಪೊಟ್ಟಣ ಪಕೋಡ ಹಾಗೆ ಇತ್ತು. ತಾವು ತಿಂದು ನೀರುಕುಡಿದು ಮಲಗುವುದಾಗಿ ಹೇಳಿದರು— ನಾನು ದೇರಣ್ಣನವರನ್ನು ಜೈಹಿಂದ್ ಎಂದು ಹೊರಬಿದ್ದೆ.

—ದಾಶರಥಿ ದೀಕ್ಷಿತ.